بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ವಾರ್ಷಿಕ ಶುಲ್ಕ ರೂ.600/-

ಸಂಚಿಕೆ: 16

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**18 ಏಪ್ರಿಲ್ 2024, 18 ಶಹಾದತ್ 1403 ಹಿಜರಿ ಶಮ್‌ಸಿ, 08 ಶವ್ವಾಲ್ 1445 ಹಿಜರಿ ಖಮರಿ.**

## *ಅಹ್ಮದಿಯಾ ವಾರ್ತೆ*

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ

وَبَارِكْ لَنَا فِيْ عُمُرِهٖ وَاَمْرِهٖ

## *ಅಲ್ಲಾಹನ ಉಪದೇಶ*

وَبِالْحَقِّ اَنْزَلْنٰهُ وَبِالْحَقِّ نَزَلَ

وَمَاۤ اَرْسَلْنٰكَ اِلَّا مُبَشِّرًا وَّنَذِيْرًا

**(ಸೂರಃ ಬನೀಇಸ್ರಾಈಲ್ : 106)**

ಅಂದರೆ: ಸತ್ಯದೊಂದಿಗೆ ನಾವು ಅದನ್ನು ಅವತೀರ್ಣಗೊಳಿಸಿದ್ದೇವೆ. ಸತ್ಯದೊಂದಿಗೆ ಅದು ಇಳಿದಿದೆ. ಶುಭವಾರ್ತೆಯನ್ನು ತಿಳಿಸುವವನಾಗಿ ಮತ್ತು ಮುನ್ನೆಚ್ಚರಿಕೆಯನ್ನು ನೀಡುವವನಾಗಿ ನಾವು ನಿನ್ನನ್ನು ನಿಯೋಜಿಸಿದ್ದೇವೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಮಾಝಿನಲ್ಲಿ ಸಾಲುಗಳನ್ನು ನೇರವಾಗಿ ಇಡಬೇಕು

ಹಝ್‌ರತ್ ನುಮಾನ್ ಬಿನ್ ಬಶೀರ್(ರ) ವರದಿ ಮಾಡುತ್ತಾರೆ ನಾನು ಹಝ್‌ರತ್ ಪೈಗಂಬರ್(ಸ) ಅವರಿಂದ ಕೇಳಿದೆ, ಹಝ್‌ರತ್ ಪೈಗಂಬರ್(ಸ) ಹೇಳಿದರು: ನೀವು ನಿಮ್ಮ ಸಾಲುಗಳನ್ನು ನೇರವಾಗಿ ಇಟ್ಟುಕೊಳ್ಳಬೇಕು, ಇಲ್ಲದಿದ್ದರೆ ಸರ್ವಶಕ್ತನಾದ ಅಲ್ಲಾಹನು (ಪರಿಣಾಮವಾಗಿ) ನಿಮ್ಮ ಮುಖಗಳಲ್ಲಿ ಮತ್ತು ನಿಮ್ಮ ಹೃದಯಗಳಲ್ಲಿ ಭಿನ್ನಭಿಪ್ರಾಯಗಳ ಬೀಜವನ್ನು ಹಾಕುತ್ತಾನೆ. **(ಬುಖಾರಿ ಕಿತಾಬುಸ್ಸಲಾತ್, ಅಧ್ಯಾಯ ತಸ್ವಿಯತುಸ್ಸುಫೂಫ್)**

ಹಝ್‌ರತ್ ಅನಸ್(ರ) ವರದಿ ಮಾಡುತ್ತಾರೆ ಹಝ್‌ರತ್ ಪೈಗಂಬರ್(ಸ) ಹೇಳಿದರು: ನೀವು ಸಾಲುಗಳನ್ನು ನೇರವಾಗಿ ಮಾಡಬೇಕು ಏಕೆಂದರೆ ಸಾಲುಗಳನ್ನು ನೇರವಾಗಿ ಇಡುವುದು ನಮಾಝನ್ನು ಪೂರ್ಣಗೊಳಿಸುವ ಒಂದು ಭಾಗವಾಗಿದೆ.

**(ಬುಖಾರಿ, ಕಿತಾಬ್ ಅಲ್-ಸಲಾತ್, ಅಧ್ಯಾಯ ಇಕಾಮತಿಸ್ಸಫ್ ವ ತಮಾಮುಸ್ಸಲಾತ)**

### ಜಮಾಅತ್‌ನೊಂದಿಗೆ ನಮಾಝಿನಲ್ಲಿ ಇಮಾಮುಸ್ಸಲಾತ್‌ಗಿಂತ ಮೊದಲು ತಲೆ ಎತ್ತುವುದು

ಹಝ್‌ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ಹಝ್‌ರತ್ ಪೈಗಂಬರ್(ಸ) ನುಡಿದರು: ನಿಮ್ಮಲ್ಲಿ ಯಾರು ಇಮಾಮುಸ್ಸಲಾತ್‌ನ ಮುಂಚೆ ತಲೆ ಎತ್ತಿದರೆ, ಅಲ್ಲಾಹನು ಆತನ ತಲೆಯನ್ನು ಕತ್ತೆಯ ತಲೆಯಂತೆ ಮಾಡುತ್ತಾನೆ ಎಂದು ಅವನು ಹೆದರುವುದಿಲ್ಲ. ಅಥವಾ ಹೇಳಿದರು: ಅವನನ್ನು ಕತ್ತೆಯಂತೆ ಕಾಣುವಂತೆ ಮಾಡುತ್ತಾನೆ, ಅಂದರೆ ಅಂತಹ ವ್ಯಕ್ತಿಯಿಂದ ತಿಳುವಳಿಕೆ ಮತ್ತು ಬುದ್ಧಿಯನ್ನು ತೆಗೆದುಹಾಕುತ್ತಾನೆ.
**(ಮುಸ್ಲಿಮ್ ಕಿತಾಬು ಸ್ಸಲಾತ್, ಅಧ್ಯಾಯ ಅನ್ನಹೀ ಅನ್ ಸಬಖಲ್ ಇಮಾಮ್)**

ನಿಮ್ಮ ಸಾಮರ್ಥ್ಯ ಮತ್ತು ಪ್ರಯತ್ನದ ಮೇಲೆ ಗರ್ವಪಡಬೇಡಿ ಮತ್ತು ಈ ಯಶಸ್ಸು ನಿಮ್ಮ ಯಾವುದೇ ಅರ್ಹತೆ ಅಥವಾ ಶ್ರಮದ ಫಲ ಎಂದು ಭಾವಿಸಬೇಡಿರಿ. ಕಾರಣ್ಯ ನಿಧಿಯಾದ ಅಲ್ಲಾಹನು, ಸತ್ಯ ನಿಷ್ಠೆಯಿಂದ ಮಾಡಿದ ಯಾರದೇ ಶ್ರಮವನ್ನು ವ್ಯರ್ಥಗೊಳಿಸುವುದಿಲ್ಲ. ಅವನೆ ನಿಮ್ಮ ಶ್ರಮಕ್ಕೆ ಫಲ ನೀಡುವವನಾಗಿದ್ದಾನೆ.

---

ನನ್ನ ವಿಶ್ವಾಸವೇನೆಂದರೆ ಮನುಷ್ಯನು ಲೋಕದಲ್ಲಿ ಎಲ್ಲಾ ತರದ ಅವಮಾನ ಮತ್ತು ಕಷ್ಟಗಳಿಂದ ಪರಿಹಾರ ಬಯಸುವುದಾದರೆ ಅದಕ್ಕೆ ಒಂದೇ ಒಂದು ಮಾರ್ಗವಿದೆ. ಅವನು ಮುತ್ತಖಿ (ಭಯಭಕ್ತಿಯುಳ್ಳವನು) ಆಗಿರಬೇಕು. ಅದೇ ಆ ಮಾರ್ಗ.

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಲೌಕಿಕ ಯಶಸ್ಸುಗಳು ಮತ್ತು ಸುಖ ಸೌಖರ್ಯಗಳು ಶಾಶ್ವತವಲ್ಲ.

ಮನುಷ್ಯನಿಗೆ ಯಾವುದೇ ಯಶಸ್ಸಿನ ಸಂಧರ್ಭದಲ್ಲಿ ಒಂದು ಸಂತೋಷ ಉಂಟಾಗುತ್ತದೆ. ಪವಿತ್ರ ಖುರ್‌ಆನಿನ ಪ್ರಕಾರ ಲಹು, ಲಅಬ್ ತಫಾಖರ್ (ಆಟ, ವಿನೋದ, ಸಂಪತ್ತು) ಎಂಬ ಮೂರು ವಿಧದ ಸಂತೋಷಗಳಿವೆ ಎಂದು ತಿಳಿದು ಬರುತ್ತದೆ. ಲಹು ಎಂಬುದರಲ್ಲಿ ಊಟೋಪಾಚಾರದ ಸಾಮಾಗ್ರಿಗಳು ಶಾಮೀಲಾಗಿದೆ. ಲಅಬ್‌ನಲ್ಲಿ ವಿವಾಹ ಮುಂತಾದ ಸಂತೋಷಗಳು ಮತ್ತು ತಫಾಖರ್‌ನಲ್ಲಿ ಸಂಪತ್ತು ಇತ್ಯಾದಿ ಸಂತೋಷಗಳು ಒಳಗೊಂಡಿವೆ. ಈ ಮೂರು ವಿಧದ ಸಂತೋಷಗಳಿಂದ ಯಾರೂ ಹೊರತಾಗಿಲ್ಲ. ಆದರೆ ನೆನಪಿಡಿರಿ. ಯಶಸ್ಸು ಮತ್ತು ಸಂತೋಷಗಳು ಶಾಶ್ವತವಾಗಿರುವುದಿಲ್ಲ. ಬದಲು ಯಾರಾದರೂ ಇದರ ವ್ಯಾಮೋಹಕ್ಕೆ ಒಳಗಾದರೆ ಆಂತಕಕ್ಕೊಳಗಾಗಬಹುದು. ಮುಂದೊಂದು ಸಮಯ ಬರುತ್ತದೆ. ಆಗ ಇವೆಲ್ಲಾ ಸಂತೋಷಗಳು ದು:ಖಗಳಲ್ಲಿ ಪರಿವರ್ತನೆಗೊಳ್ಳುತ್ತವೆ.

ಯಾವ ಲೌಕಿಕ ಯಶಸ್ಸುಗಳೂ ಪರೀಕ್ಷೆಗಳಿಂದ ಹೊರತಾಗಿರುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಕಾಣಬಹುದು. **ಖಲಕಲ್ ಮೌತ ವಲ್ ಹಯಾತ ಲಿಯಬ್‌ಲುವಕುಮ್** (ಅಲ್-ಮುಲ್ಕ್-3) ನಿಮ್ಮ ಪೈಕಿ ಕೃತ್ಯ ನಿರ್ವಹಣೆಯಲ್ಲಿ ಯಾರು ಅತ್ಯುತ್ತಮರೆಂದು ಪರೀಕ್ಷಲಿಕ್ಕೋಸ್ಕರ ಅವನು ಮರಣ ಮತ್ತು ಜೀವನವನ್ನೂ ಸೃಷ್ಟಿಸಿದ್ದಾನೆ. ಜಯಾಪಜಯಗಳು ಜೀವನದ ಅವಿಭಾಜ್ಯ ಅಂಗಗಳಾಗಿರುತ್ತವೆ. ಯಶಸ್ಸು ಎಂಬುದು ಒಂದು ವಿಧದ ಜೀವವಿದ್ದ ಹಾಗೆ. ಒಬ್ಬನಿಗೆ ತನ್ನ ಯಶಸ್ಸಿನ ಸುದ್ದಿ ತಲುಪಿದರೆ ಅವನಿಗೆ ಒಂದು ಹೊಸ ಜೀವನ ದೊರೆತಂತಾಗುತ್ತದೆ. ವಿಫಲಗೊಂಡ ಸುದ್ದಿ ಬಂದರೆ ಜೀವವಿದ್ದವನಿಗೂ ಮರಣ ಹೊಂದಿದ ಹಾಗೆ ಭಾಸವಾಗುತ್ತದೆ. ಕೆಲವೊಮ್ಮೆ ದುರ್ಬಲ ಹೃದಯವುಳ್ಳವರು ಪ್ರಾಣವನ್ನೂ ಕಳಕೊಳ್ಳುತ್ತಾರೆ.

ಈ ಮಾತನ್ನು ನೆನಪಿಡಿ. ಏನೆಂದರೆ ಸಾಮಾನ್ಯವಾಗಿ ಜೀವನ ಮತ್ತು ಮರಣ ಸರಳವಾದುದಾಗಿದೆ. ಆದರೆ ನರಕದ ಜೀವನ ಕಷ್ಟಕರವಾಗಿದೆ. ಒಬ್ಬ ಸಜ್ಜನನು ವೈಫಲ್ಯದ ನಂತರ ಸಫಲಗೊಂಡು ಇನ್ನಷ್ಟು ಸಜ್ಜನನಾಗುತ್ತಾನೆ ಮತ್ತು ಅವನಿಗೆ ಅಲ್ಲಾಹನ ಮೇಲೆ ವಿಶ್ವಾಸ ವೃದ್ಧಿಯಾಗುತ್ತದೆ. ಅವನು ಯೋಚನೆ ಮಾಡಿದಾಗ ಅವನಿಗೆ ತಿಳಿಯುತ್ತದೆ - ನನ್ನ ಅಲ್ಲಾಹನು ಎಂತಹ ಮಹಿಮಾವಂತನು ಎಂದು. ಅವನ ಲೌಕಿಕ ಯಶಸ್ಸು ಅಲ್ಲಾಹನನ್ನು ಗುರುತಿಸುವ ಒಂದು ಸಾಧನಯಾಗುತ್ತದೆ. ಇಂತಹ ಜನರಿಗೆ ಈ ಲೌಕಿಕ ಯಶಸ್ಸುಗಳು ನೈಜ ಯಶಸ್ಸಿನ ಮಾರ್ಗವಾಗಿ ಪರಿಣಮಿಸುತ್ತವೆ. (ಇಸ್ಲಾಮಿನ ಧಾರ್ಮಿಕ ಅರ್ಥದಲ್ಲಿ ಇದನ್ನು ಫಲಾಹ್ ಎನ್ನುತ್ತಾರೆ) ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೈಜವಾದ ಸುಖ, ಸಂತೋಷಗಳು ಈ ಲೌಕಿಕ ಜೀವನದಲ್ಲಿ ಎಂದೂ ಲಭಿಸಲಾರದು. ಲೋಕದ ಎಲ್ಲ ಭಾಗಗಳನ್ನು ಸಂದರ್ಶಿಸಿದರೂ ಸಹ ಮನುಷ್ಯನು ನೈಜ ಮತ್ತು ಶಾಶ್ವತ ಸುಖವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಓರ್ವ ಶ್ರೀಮಂತನು ಯಥೇಚ್ಚ ಹಣ, ಸಂಪತ್ತುಗಳನ್ನು ಹೊಂದಿದ್ದರೂ ಇನ್ನೂ ಸಂಪಾದನೆಯಲ್ಲಿ ತೊಡಗಿರುತ್ತಾನೆ. ಆದರೆ ಅವನ ಸ್ಥಿತಿ "ಜರ್‌ಬ್" ಅಂದರೆ ತುರುಸುವಿಕೆಯ ರೋಗಿಯಂತಿರುತ್ತದೆ. ಅವನಗೆ ತುರಿಸಿಕೊಂಡಷ್ಟು ಸುಖ ದೊರೆಯುತ್ತದೆ. ಆದರೆ ಈ ತುರುಸುವಿಕೆಯ ಅಂತಿಮ ಪರಿಣಾಮವಾಗಿ ರಕ್ತ ಹರಿದು ಬರುತ್ತದೆ.

ಆದುದರಿಂದ ಈ ಲೌಕಿಕ ಮತ್ತು ತಾತ್ಕಾಲಿಕ ಯಶಸ್ಸಿನ ಮೇಲೆ ಅಷ್ಟೊಂದು ಸಂತೋಷ ಪಡಬೇಡಿರಿ. ಯಾಕೆಂದರೆ ತತ್ಫಲವಾಗಿ ನೀವು ನಿಜವಾದ ಯಶಸ್ಸಿನಿಂದ ದೂರವಾಗುವಿರಿ. ಬದಲಾಗಿ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪ್ಯೂಟಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರಿಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರಿಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ-1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ-2:** ಕೆಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝ್ಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ-3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ-4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ-5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ಯವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ. **(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516, ಮೊಬೈಲ್: 09682627592, 09682587713,
ಕಛೇರಿ: 01872-501130, ಇ-ಮೇಲ್: diwan@qadian.in

## ಪರಮಾಣು ವಿಕಿರಣದ ಹಾನಿಕಾರಕ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಹೋಮಿಯೋಪಥಿ ಮದ್ದು

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ) ರವರು ಪರಮಾಣು ವಿಕಿರಣದ ಹಾನಿಕಾರಕ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಚತುರ್ಥ ಖಲೀಫರು ನಿರ್ದೇಶಿಸಿದಿ ಹೋಮಿಯೋಪತಿ ಮದ್ದನ್ನು ಕೆಳಗಿನಂತೆ ಉಪಯೋಗಿಸಲು ಆಜ್ಞಾಪಿಸಿದ್ದಾರೆ. ಅದೇ ರೀತಿ ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬನನ್ನು ತನ್ನ ರಕ್ಷಣೆಯಲ್ಲಿರಿಸುವಂತೆ ದುಆ ಮಾಡಲು ಉಪದೇಶಿಸಿದ್ದಾರೆ.

**ಹುವಶ್ಶಾಫಿ**

| ಉಪಯೋಗಿಸುವ ವಿಧಾನ | | ವಯಸ್ಕರರಿಗೆ | 10 ರಿಂದ 15 ವರ್ಷ ಪ್ರಾಯದ ಮಕ್ಕಳಿಗೆ | 10 ವರ್ಷಕ್ಕಿಂದ ಕಡಿಮೆ ಪ್ರಾಯದ ಮಕ್ಕಳಿಗೆ | ಗರ್ಭಿಣಿ/ಹಾಲುಣಿಸುವ ಮಹಿಳೆಯರಿಗೆ |
|---|---|---|---|---|---|
| ಮದಲ ಸಲದ ಔಷಧಿ | | Carcinosin CM | Carcinosin 1000 | Carcinosin 200 | Carcinosin 1000 |
| ಮದಲ ಸಲದ ಔಷಧಿಯ 7 ದಿನದ ನಂತರ | ಎರಡನೇ ಸಲದ ಔಷಧಿ | Radium Brom CM | Radium Brom 1000 | Radium Brom 200 | Radium Brom 1000 |
| ಎರಡನೇ ಸಲದ ಔಷಧಿಯ 7 ದಿನದ ನಂತರ | ಮೂರನೇ ಸಲದ ಔಷಧಿ | Carcinosin CM | Carcinosin 1000 | Carcinosin 200 | Carcinosin 1000 |
| ಮೂರನೇ ಸಲದ ಔಷಧಿಯ 7 ದಿನದ ನಂತರ | ನಾಲ್ಕನೇ ಸಲದ ಔಷಧಿ | Radium Brom CM | Radium Brom 1000 | Radium Brom 200 | Radium Brom 1000 |
| ನಲ್ಕನೇ ಸಲದ ಔಷಧಿಯ 7 ದಿನದ ನಂತರ | ಐದನೇ ಸಲದ ಔಷಧಿ | Carcinosin CM | Carcinosin 1000 | Carcinosin 200 | Carcinosin 1000 |
| ಐದನೇ ಸಲದ ಔಷಧಿಯ 7 ದಿನದ ನಂತರ | ಆರನೇ ಸಲದ ಔಷಧಿ | Radium Brom CM | Radium Brom 1000 | Radium Brom 200 | Radium Brom 1000 |

**ಗಮನಿಸಿ:** ಮೇಲಿನ ಕೋರ್ಸ್ ಅನ್ನು ಪೂರ್ಣಗೊಳಿಸಿದ ಎರಡು ತಿಂಗಳ ನಂತರ, ಅದೇ ಪಾಕವಿಧಾನದೊಂದಿಗೆ ಈ ಔಷಧಿಗಳನ್ನು ಮತ್ತೊಮ್ಮೆ ಪುನರಾವರ್ತಿಸಿ.

# ಖುತ್‌ಬ ಜುಮುಅ

ಹರ್ ಎಕ್ ನೇಕಿ ಕಿ ಜಡ್ ಏಹ್ ಇತ್ತಿಖಾ ಹೈ ಅಗರ್ ಎಹ್ ಜಡ್ ರಹೀ ತೊ ಸಬ್ ಕುಚ್ ರಹಾ ಹೈ

ನಾವು ಅಲ್ಲಾಹನ ಅನುಗ್ರಹಗಳ ಮತ್ತು ಔದಾರ್ಯಗಳ ಸ್ಥಾಯಿಯಾದ ವಾರಸುದಾರರಾಗಿರಲಿಕ್ಕಾಗಿ ರಮಝಾನಿನ ವಾತಾವರಣದ ಪ್ರಭಾವವನ್ನು ತಮ್ಮ ಜೀವಿತದ ಸ್ಥಾಯಿಯಾದ ಭಾಗವನ್ನಾಗಿ ಮಾಡಬೇಕು.

ನೈಜ ಉದ್ದೇಶ ತಖ್ವವನ್ನು ಸೃಷ್ಟಿಸಿಕೊಳ್ಳುವುದಾಗಿದೆ, ಇದು ಸೃಷ್ಟಿಯಾಗದಿದ್ದರೆ ಉಪವಾಸಗಳ ಮೂಲ ಉದ್ದೇಶವೇ ಮುಗಿದು ಹೋಗುತ್ತದೆ

ರಮಝಾನಿನಲ್ಲಿ ಪವಿತ್ರ ಖುರ್‌ಆನ್ ಓದಲು, ಓದಿಸಲು, ಆಲಿಸಲು, ಇತರರನ್ನು ಆಲಿಸುವಂತೆ ಮಾಡಲು, ಆರಾಧನೆಗಳು ಮತ್ತು ದೇವಸ್ಮರಣೆ ಬಗ್ಗೆ ಗಮನಹರಿಸಬೇಕು. ಆರಾಧನೆಯ ಕಡೆಗೆ ಹೆಚ್ಚು ಗಮನ ನೀಡಬೇಕು, ಬದಲಿಗೆ ವಿವಿಧ ರೀತಿಯ ಕೆಲಸ ಮಾಡುವವರು ತಮ್ಮ ಕೆಲಸದಿಂದ ಬಂದು ಇಫ್ತಾರ್ ಔತಣವನ್ನು ತಿನ್ನುವುದರಲ್ಲಿ ನಿರತರಾಗುತ್ತಾರೆ ಮತ್ತು ಇಫ್ತಾರ್ ಔತಣಕೂಟವನ್ನು ಏರ್ಪಡಿಸುವವರು ಸಹ ಇದರ ಬಗ್ಗೆ ಗಮನ ನೀಡುವ ಬದಲು, ಅಂದರೆ ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳನ್ನು ಓದುವುದು ದೇವಸ್ಮರಣೆ ಆರಾಧನೆ ಕಡೆಗೆ ಗಮನ ನೀಡುವ ಬದಲು ವಿವಧ ರೀತಿಯ ಹಾಗೂ ಉತ್ತಮ ರೀತಿಯ ಇಫ್ತಾರ್‌ಗಳನ್ನು ಏರ್ಪಡಿಸಲು ಮತ್ತು ಜನರಿಂದ ವಾಹ್, ವಾಹ್ ಎಂದು ಹೇಳಿಸಿಕೊಳ್ಳುವಲ್ಲಿ ನಿರತರಾಗಿರುತ್ತಾರೆ. ಆದರೆ ಈ ವಿಷಯಗಳು ರಮಝಾನ್‌ನ ಉದ್ದೇಶವಲ್ಲ. ಇವು ಧರ್ಮನಿಷ್ಠೆಯಿಂದ ದೂರವಾಗುವ ವಿಷಯಗಳಾಗಿವೆ.

ನಾವು ರಮಝಾನ್‌ನಲ್ಲಿ ಉಪವಾಸದ ಹಕ್ಕನ್ನು ಈಡೇರಿಸಲು ಪ್ರಯತ್ನಿಸಬೇಕು. ಉಪವಾಸದ ಮೂಲ ಉದ್ದೇಶ ದೇವಭಕ್ತಿಯನ್ನು ಕೈಗೊಳ್ಳಲು ಪ್ರಯತ್ನಿಸಬೇಕು.

ಶೈತಾನನನ್ನು ಬಹಳ ಕ್ಷುಲ್ಲಕವೆಂದು ಭಾವಿಸಬಾರದು. “ಅಲ್ಲಾಹನ ದಾಸರಲ್ಲಿ ಹೆಚ್ಚಿನವರು ನನ್ನ ಪ್ರೇರಣೆಗೆ ಒಳಪಟ್ಟು ನನ್ನನ್ನು ಹಿಂಬಾಲಿಸುವರು” ಎಂದು ಶೈತಾನನು ದೊಡ್ಡದಾಗಿ ಸವಾಲೊಡ್ಡಿ ಹೇಳಿದ್ದನು. ಆದ್ದರಿಂದ ನಾವು ರಮಝಾನಿನಲ್ಲಿ ಶೈತಾನನ ಈ ಪಂಥಾಹ್ವಾನದ ಎದುರಾಗಿ ಹೋರಾಡಬೇಕು.

ಒಂದು ವಿಧದ ಆಹಾರವನ್ನು ಕಡಿಮೆಗೊಳಿಸಿ ಮತ್ತೊಂದು ವಿಧದ ಆಹಾರವನ್ನು ವರ್ಧಿಸಲು ಅಲ್ಲಾಹನು ಉದ್ದೇಶಿಸುತ್ತಾನೆ. ಅಲ್ಲಾಹನ ಕಡೆಗೆ ಬಾಗುವಂತಾಗಲು ಮತ್ತು ಭೌತಿಕತೆಯಿಂದ ದೂರವಿರುವಂತಾಗಲು ಮನುಷ್ಯನು ಅಲ್ಲಾಹನ ಸ್ಮರಣೆಯಲ್ಲಿ ನಿರತನಾಗಿರಬೇಕು. ಅಂದರೆ ಸರ್ವಶಕ್ತನಾದ ಅಲ್ಲಾಹನ ಮೇಲೆ ಗಮನವಿರಬೇಕು ಮತ್ತು ಜಗತ್ತಿನಿಂದ ನಿರಾಸಕ್ತಿ ಇರಬೇಕು. ಆದ್ದರಿಂದ, ಉಪವಾಸ ಎಂದರೆ ಒಬ್ಬ ವ್ಯಕ್ತಿಯು ದೇಹವನ್ನು ಪೋಷಿಸುವ ಒಂದು ಆಹಾರವನ್ನು ಬಿಟ್ಟು ಆತ್ಮದ ತೃಪ್ತಿ ಮತ್ತು ನೆರವೇರಿಕೆಯ ಮೂಲವಾದ ಇನ್ನೊಂದು ಆಹಾರವನ್ನು ಪಡೆಯಬೇಕು. ಮತ್ತು ಸರ್ವಶಕ್ತನಾದ ಅಲ್ಲಾಹನಿಗಾಗಿ ಮಾತ್ರ ಉಪವಾಸ ಮಾಡುವವರು ಮತ್ತು ಅವುಗಳನ್ನು ಆಚರಣೆಯಾಗಿ ಇಟ್ಟುಕೊಳ್ಳದೆ, ಅವರು ಸರ್ವಶಕ್ತನಾದ ಅಲ್ಲಾಹನ ಸ್ತೋತ್ರ ಮತ್ತು ವೈಭವೀಕರಣದಲ್ಲಿ ನಿರತರಾಗಬೇಕು, ಇದರಿಂದ ಅವರಿಗೆ ಇತರ ಜೀವನಾಂಶವನ್ನು ಲಭಿಸಬಹುದು. (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ರಮಝಾನಿನಲ್ಲಿ ಪವಿತ್ರ ಖುರ್‌ಆನ್ ಓದುವುದು ಮತ್ತು ಅದನ್ನು ಮನವರಿಕೆ ಮಾಡುವುದರ ಜೊತೆಗೆ ಆರಾಧನೆ ಮತ್ತು ದೇವಸ್ಮರಣೆ ಬಹಳ ಅಗತ್ಯ.

ಹೃದಯವು ಅಲ್ಲಾಹನನ್ನು ಸ್ತುತಿಸುತ್ತಿರಬೇಕು ಮತ್ತು ಅವನ ಪರಿಶುದ್ಧಿಯನ್ನು ಕೊಂಡಾಡುತ್ತಿರಬೇಕು. ಇದಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ತಿಳಿಸಿರುವ ಒಂದು ಇಲ್‌ಹಾಮೀ ದುಆ ಸಹ ಇದೆ. ಅದೇನೆಂದರೆ, **ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್**. ಇದೊಂದು ಬಹಳ ಮುಖ್ಯ ದುಆ ಆಗಿದೆ.

ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಹೇಳುವುದು ದುಆ ಸ್ವೀಕಾರಕ್ಕಾಗಿ ಅವಶ್ಯ. ಇದು ಅಲ್ಲಾಹನ ಆಜ್ಞೆಯಾಗಿದೆ.

ಧರ್ಮನಿಷ್ಠೆಯು (ತಖ್ವ) ಅಲ್ಲಾಹನಿಗೆ ಇಷ್ಟವಾಗುತ್ತದೆ. ಧರ್ಮನಿಷ್ಠೆಯೇ (ತಖ್ವ) ಪ್ರತಿಯೊಂದು ಒಳ್ಳೆಯದಕ್ಕೂ ದಾರಿ ಮಾಡಿಕೊಡುತ್ತದೆ. ಈ ತಖ್ವದಿಂದಲೇ ಲೌಕಿಕ ಭೋಗಗಳಿಂದ ಶುದ್ಧಿಯಾಗುವುದು. ಮನುಷ್ಯನ ಎಲ್ಲಾ ದೈಹಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸುವುದು ಧರ್ಮನಿಷ್ಠೆಯೇ ಆಗಿದೆ.

ಎಲ್ಲಾ ಧಾರ್ಮಿಕ ಅಧ್ಯಯನಗಳಿಗೆ ಧರ್ಮನಿಷ್ಠೆಯು (ತಖ್ವ) ಕೀಲಿಯಾಗಿದೆ ಎಂಬುದನ್ನು ನೆನಪಿಡಿ. ಧರ್ಮನಿಷ್ಠೆ (ತಖ್ವ) ಇಲ್ಲದೆ ಮನುಷ್ಯ ಅವುಗಳನ್ನು ಕಲಿಯಲು ಸಾಧ್ಯವಿಲ್ಲ.

ಇಂದು ರಮಝಾನ್‌ನ ಈ ಪರಿಸರದ ಪ್ರಯೋಜನವನ್ನು ಪಡೆದುಕೊಳ್ಳುವುದು ಮತ್ತು ಈ ನಿಧಿಯನ್ನು ಹೊರತೆಗೆಯಲು ಶ್ರಮಿಸುವುದು ನಮ್ಮ ಕೆಲಸವಾಗಿದೆ, ಇದರಿಂದ ನಾವು ಸಹ ಅಲ್ಲಾಹನ ಸಂತೃಪ್ತಿಯನ್ನು ಗಳಿಸಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ದೇವರಿಗೆ ಭಯಪಡುವ ಸ್ಥಿತಿ ಇಲ್ಲದಿದ್ದರೆ, ನಿಜವಾದ ತಖ್ವವನ್ನು ಪಡೆಯಲು ಸಾಧ್ಯವಿಲ್ಲ

ಆರಾಧನೆ ಮತ್ತು ದೈವಾಸ್ಮರಣೆ ಮತ್ತು ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವ ಮೂಲಕ ಸರ್ವಶಕ್ತನಾದ ಅಲ್ಲಾಹನೊಂದಿಗೆ ಅದೃಶ್ಯ ರೀತಿಯಲ್ಲಿ ಸಂಬಂಧವನ್ನು ಹೊಂದಬೇಕು.

ನಿರ್ದಿಷ್ಟ ದಿನಗಳಲ್ಲಿ ಮಾತ್ರ ಅಲ್ಲಾಹನು ಉಪವಾಸವನ್ನು ಕಡ್ಡಾಯಗೊಳಿಸಿದ್ದರೂ ಕೂಡ ನಮಗೆ ಸೌಕರ್ಯವನ್ನು ನೀಡಿದ್ದಾನೆ. ಆದ್ದರಿಂದ ರೋಗಿ ಮತ್ತು ಯಾತ್ರಿಕ ಸ್ವತಃ ತನ್ನ ಮೇಲೆ ಭಾರ ಹೊರಿಸಬಾರದು ಮತ್ತು ರೋಗಶಮನವಾದ ನಂತರ ಅಥವಾ ಯಾತ್ರೆ ಮುಗಿಸಿದ ನಂತರ ಉಪವಾಸವನ್ನು ಪೂರ್ತಿ ಮಾಡಬೇಕು ಎಂದು ಅಲ್ಲಾಹನು ಹೇಳಿದ್ದಾನೆ.

ನಿಮ್ಮ ತಪ್ಪಿದ ಉಪವಾಸಗಳಿಗಾಗಿ ಸ್ವಲ್ಪ ಫಿದ್‌ಯದ ಆಜ್ಞೆ ನೀಡಲಾಗಿದೆ. ಆದರೆ ಇದು ಪ್ರತಿಯೊಬ್ಬರಿಗೆ ಅಲ್ಲ. ಬದಲಾಗಿ ಇದು ಆರ್ಥಿಕವಾಗಿ ಸಮರ್ಥರಾಗಿ ಇರುವವರಿಗೆ ಇರುವ ಆದೇಶವಾಗಿದೆ. ಅದರಿಂದ ದುಪ್ಪಟ್ಟು ಪ್ರತಿಫಲ ಲಭಿಸುತ್ತದೆ. ಇದು ಹೆಚ್ಚಿನ ಸತ್ಕರ್ಮವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಫಿದ್‌ಯವನ್ನು ಏಕೆ ನಿಶ್ಚಯಿಸಿರಬಹುದು ಎಂಬ ಯೋಚನೆ ನನಗೊಮ್ಮೆ ಉಂಟಾಯಿತು. ಶಕ್ತಿ ಲಭಿಸಲಿಕ್ಕಾಗಿ ಆಗಿದೆ ಎಂದು ನನಗೆ ಆಗ ಗೊತ್ತಾಯಿತು. ಮನುಷ್ಯನಿಗೆ ವ್ರತಾನುಷ್ಠಾನ ಮಾಡಲು ಸೌಭಾಗ್ಯ ಲಭಿಸಲು ಇದನ್ನು ನಿಶ್ಚಯಿಸಲಾಗಿದೆ.

ಆದ್ದರಿಂದ ತಖ್ವ ಎಂದರೆ ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು ಅನುಸರಿಸುವುದಾಗಿದೆ.

ಜಮಾಅತಿನ ಅಭಿವೃದ್ಧಿಗಳಿಗಾಗಿ ಮತ್ತು ಎಲ್ಲ ಕಷ್ಟತೆಗಳು ದೂರವಾಗಲಿಕ್ಕಾಗಿ, ಮುಸ್ಲಿಂ ಲೋಕಕ್ಕಾಗಿ, ಯುದ್ಧಗಳ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯಲು, ಲೋಕದ ಪ್ರಚಲಿತ ಸ್ಥಿತಿಗತಿಗಳಿಗಾಗಿ, ಯುದ್ಧ ಮತ್ತು ಅದರ ಅಪಾಯಕರ ಪರಿಣಾಮಗಳಿಂದ ರಕ್ಷಣೆಯಲ್ಲಿರಲು ದುಆವಿನ ಕೋರಿಕೆ

**ಪವಿತ್ರ ಮಾಸ ರಮಝಾನ್‌ನ ಅನುಗ್ರಹಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳ ಬೆಳಕಿನಲ್ಲಿ ತಖ್ವ (ಧರ್ಮನಿಷ್ಠೆ) ವನ್ನು ಗಳಿಸಲು ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **15-03-2024** ರಂದು ನೀಡಿದ **ಖುತ್‌ಬ ಜುಮುಅ**

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ

اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ -

اَلْحَمْدُ لِلّٰهِ رَبِّ الْعٰلَمِيْنَ ○ الرَّحْمٰنِ الرَّحِيْمِ ○ مٰلِكِ يَوْمِ الدِّيْنِ ○ اِيَّاكَ نَعْبُدُ وَاِيَّاكَ نَسْتَعِيْنُ ○ اِهْدِنَا الصِّرَاطَ الْمُسْتَقِيْمَ ○ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ ○

يٰٓاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ كَمَا كُتِبَ عَلَى الَّذِيْنَ مِنْ قَبْلِكُمْ لَعَلَّكُمْ تَتَّقُوْنَ ۝ اَيَّامًا مَّعْدُوْدٰتٍ ؕ فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ ؕ فَمَنْ تَطَوَّعَ خَيْرًا فَهُوَ خَيْرٌ لَّهٗ ؕ وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ ۝ (البقرہ:184، 185)

ಎಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.

(ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. ಉಪವಾಸ ಮಾಡಲು (ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ ಸಮರ್ಥರಿದ್ದರೆ) ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವುದಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ. (2:184, 185).

ರಮಝಾನಿನ ತಿಂಗಳು ಅಲ್ಲಾಹನ ಅನುಗ್ರಹದಿಂದ ಆರಂಭಗೊಂಡಿದೆ.

ಇದು ಬಹಳ ಶ್ರೇಷ್ಠ ಮತ್ತು ಅನುಗ್ರಹಗಳ ಮಾಸವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. (ಸ್ ು ನ್ ನ್ ಅನ್ನಿಸಾಇ, ಕಿತಾಬುಸ್ಸೌಮ್, ಹದೀಸ್–2108)

ಈ ತಿಂಗಳಲ್ಲಿ ಅಲ್ಲಾಹನು ತನ್ನ ದಾಸರಿಗೆ ತನ್ನ ಅನುಗ್ರಹಗಳನ್ನು ದಯಪಾಲಿಸಲು ಬಹಳ ಕೃಪಾಳು ಆಗುತ್ತಾನೆ. ಅಲ್ಲಾಹನು ಸಾಮಾನ್ಯ ದಿನಗಳಲ್ಲೂ ತನ್ನ ದಾಸರಿಗೆ ನಮ್ಮ ಊಹೆಗೂ ಮೀರಿ ದಯಪಾಲಿಸುತ್ತಾನೆ. ಈ ತಿಂಗಳಲ್ಲಿ ವಿಶೇಷವಾಗಿ ಅಲ್ಲಾಹನು ಶೈತಾನನನ್ನು ಬಂಧಿಸಿ ಅವನ ಹಿಡಿತದಿಂದ ರಕ್ಷಣೆ ಪಡೆಯುವ ಮಾರ್ಗವನ್ನು ಒದಗಿಸುತ್ತಾನೆ. ಅದರ ಉದಾಹರಣೆ ನೀಡಲು ನಮ್ಮ ಬಳಿ ಪದಗಳೇ ಇಲ್ಲ. ನಾವು ಸರ್ವಶಕ್ತನಾದ ಅಲ್ಲಾಹನ ಕಡೆಗೆ ಹೋದಾಗಲೆಲ್ಲ ಅಲ್ಲಾಹನ ದಯೆಯ ಬಾಗಿಲು ಮೊದಲಿಗಿಂತ ಹೆಚ್ಚಾಗಿ ತೆರೆದಿರುವುದಾಗಿ ಪಡೆಯುತ್ತೇವೆ. ಸರ್ವಶಕ್ತನಾದ ಅಲ್ಲಾಹನು ಈ ಮಾಸದಲ್ಲಿ ತನ್ನ ದಯೆಯನ್ನು ದಯಪಾಲಿಸುತ್ತಾನೆ. ಕಳೆದ ದಿನಗಳಲ್ಲಿ ಆರಾಧನೆಗಳಲ್ಲಿ ನಾವು ತೋರಿಸಿರುವ ಆಲಸ್ಯದಿಂದ ಉಂಟಾದ ಕೊರತೆಗಳನ್ನು ಈಡೇರಿಸಲು ಅಲ್ಲಾಹನು ನಮಗೆ ಈ ತಿಂಗಳಲ್ಲಿ ಸಂದರ್ಭಗಳನ್ನು ನೀಡಿದ್ದಾನೆ. ಮತ್ತು ಸಾಂತ್ವನದಿಂದ ನಿಮಗೆ ಪ್ರತಿಫಲ ನೀಡಲಿ. ಆದರೆ ಸರ್ವಶಕ್ತನಾದ ದೇವರು ಅವನ ಮಹಿಮೆಯಲ್ಲಿ ಅತ್ಯುತ್ತಮ ಮತ್ತು ಕರುಣಾಮಯಿ. ಆದ್ದರಿಂದ ಪ್ರಯೋಜನ ಪಡೆದುಕೊಳ್ಳಿ.

ರಮಝಾನ್ ತಿಂಗಳಲ್ಲಿ ಮಸೀದಿಗಳಲ್ಲಿ ದರ್ಸಿನ ಏರ್ಪಾಡು ಇರುತ್ತದೆ. ಅದೇ ರೀತಿಯಲ್ಲಿ ಎಂ.ಟಿ.ಎ.ದಲ್ಲೂ ಅದರ ಏರ್ಪಾಡು ಇದೆ. ಅದರಿಂದ ಪ್ರಯೋಜನ ಪಡೆಯಬೇಕು. ಅಲ್ಲಾಹನ ಸಾಮೀಪ್ಯದ ಮಾರ್ಗಗಳನ್ನು ಹುಡುಕಲು ಪ್ರಯತ್ನಿಸಬೇಕಾಗಿದೆ.

ತದನಂತರ ನಾವು ಅಲ್ಲಾಹನ ಅನುಗ್ರಹಗಳ ಮತ್ತು ಔದಾರ್ಯಗಳ ಸ್ಥಾಯಿಯಾದ ವಾರಸುದಾರರಾಗಿರಲಿಕ್ಕಾಗಿ ರಮಝಾನಿನ ವಾತಾವರಣದ ಪ್ರಭಾವವನ್ನು ತಮ್ಮ ಜೀವಿತದ ಸ್ಥಾಯಿಯಾದ ಭಾಗವನ್ನಾಗಿ ಮಾಡಬೇಕು. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಈ ಪರಿಸರವನ್ನು ಅತ್ಯುತ್ತಮ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸುತ್ತಿರುವಾಗ ನನ್ನ ಕಡೆಗೆ ಬನ್ನಿ, ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಸರ್ವಶಕ್ತನಾದ ಅಲ್ಲಾಹನ ಬಳಿಗೆ ತನ್ನ ಸೇವಕನ ಬರುವಿಕೆಯಿಂದ ಎಷ್ಟು ಸಂತೋಷಪಡುತ್ತಾನೆ ಎಂಬುದನ್ನು ಹಝ್ರತ್ ಪೈಗಂಬರ್(ಸ) ಅವರ ಈ ಮಾತಿನಿಂದ ಅಳೆಯಬಹುದು. ರಸೂಲುಲ್ಲಾಹ್(ಸ) ಹೀಗೆ ಹೇಳಿರುವರು: ಓರ್ವ ತಾಯಿಗೆ ತನ್ನ ಕಾಣೆಯಾದ ಮಗು ಲಭಿಸುವಾಗ ಉಂಟಾಗುವ ಖುಶಿಗಿಂತಲೂ ಹೆಚ್ಚಿನ ಸಂತೋಷ ಅಲ್ಲಾಹನ ದಾಸ ಅಲ್ಲಾಹನ ಕಡೆಗೆ ಹೋಗುವಾಗ ಅಲ್ಲಾಹನಿಗೆ ಉಂಟಾಗುತ್ತದೆ.(ಸಹೀಹ್ ಬುಖಾರಿ, ಕಿತಾಬುಲ್ ಅದಬ್, ಹದೀಸ್–5999, ಕಿತಾಬುದ್ದಾವಾತ್ 6308)

ಅಂದರೆ, ಅಲ್ಲಾಹನ ಹಕ್ಕುಗಳನ್ನು ಮತ್ತು ದಾಸರ ಹಕ್ಕುಗಳನ್ನು ಈಡೇರಿಸದೆ ಇರುವವರು ಅಥವಾ ಈಡೇರಿಸುವಾಗ ತಮ್ಮ ಹಕ್ಕುಗಳನ್ನು ಈಡೇರಿಸದೆ ಇರುವವರು ಅದರಲ್ಲಿ ಆಲಸ್ಯತನವನ್ನು ತೋರಿಸುವವರು ನಿಜವಾಗಿಯು ಆ ಹಕ್ಕುಗಳನ್ನು ಈಡೇರಿಸುವವರಾದಾಗ ಅಲ್ಲಾಹನ ಸಂತೋಷಕ್ಕೆ ಮಿತಿಯೇ ಇರುವುದಿಲ್ಲ ಮತ್ತು ಅಲ್ಲಾಹನು ತನ್ನ ದಾಸನನ್ನು ಮೆಚ್ಚಿದಾಗ, ಅವನು ಅವನನ್ನು ಎಷ್ಟರ ಮಟ್ಟಿಗೆ ಅನುಗ್ರಹಿಸುತ್ತಾನೆ ಎಂದರೆ ಅದಕ್ಕೆ ಮಿತಿಯೇ ಇರುವುದಿಲ್ಲ. ಆದ್ದರಿಂದ ನಾವು ರಮಝಾನಿನ ಈ ವಾತಾವರಣದಿಂದ ಪ್ರಯೋಜನ ಪಡೆಯುವುದಾದರೆ ನಾವು ಸೌಭಾಗ್ಯಶಾಲಿಗಳಾಗುವೆವು.

ನಾನು ಪಠಿಸಿದ ಸೂರಃ ಬಖರದ ಈ ವಚನಗಳಲ್ಲಿ ತಖ್ವಾ ಕೈಗೊಳ್ಳುತ್ತಾ ಅಲ್ಲಾಹನ ಆದೇಶಗಳನ್ನು ಪಾಲಿಸಲು ನಿರ್ದೇಶನ ನೀಡುವುದರ ಜೊತೆಗೆ ಕೆಲವು ಇತರ ಆಜ್ಞೆಗಳ ಪ್ರಸ್ತಾಪವನ್ನೂ ಮಾಡಿರುವನು. ಆದುದರಿಂದ ನಾವು ಅಲ್ಲಾಹನ ಸಾಮೀಪ್ಯಕ್ಕೆ ಪಾತ್ರರಾಗಲು ಮತ್ತು ಅದರ ಮಾರ್ಗಗಳಲ್ಲಿ ನಡೆಯಲು

ಹಝ್ರತ್ ಪೈಗಂಬರ್(ಸ)ರ ಮೂಲಕ ಸರ್ವಶಕ್ತನಾದ ಅಲ್ಲಾಹನು ನಮಗೆ ಅಂತಹ ವಿವೇಕಯುತ ಗ್ರಂಥವನ್ನು ನೀಡಿರುವುದು ನಮ್ಮ ಅದೃಷ್ಟವಾಗಿದೆ. ಇದು ಮೊದಲ ಆಯತ್ ಆಗಿದೆ. ಅದರ ಮೊದಲ ಆಜ್ಞೆಯಲ್ಲಿ ಓದಾರ್ಯದ ಮಾರ್ಗಗಳನ್ನು ಅನುಸರಿಸಲು ಗಮನ ಸೆಳೆಯಲಾಗಿದೆ ಮತ್ತು ನೀವು ಉಪವಾಸ ಅನುಷ್ಠಾನದಿಂದ ವಿಶಿಷ್ಟವಾದದ್ದನ್ನು ಮಾಡಲು ಪ್ರಾರಂಭಿಸಿದ್ದೀರಿ ಎಂದಲ್ಲ ಬದಲಿಗೆ ಉಪವಾಸವು ನಿಮ್ಮಿಂದ ಪೂರ್ವಜರ ಮೇಲೂ ಕಡ್ಡಾಯಗೊಳಿಸಲಾಗಿತ್ತು ಎಂದು ಹೇಳುವ ಮೂಲಕ ಓದಾರ್ಯರಾಗಿರಿ ಎಂದು ಸಲಹೆ ನೀಡಿದನು. ಅವರ ಉಪವಾಸದಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದು, ಆದರೆ ಅವರ ಮೇಲೆ ಉಪವಾಸಗಳನ್ನು ಹೇರಲಾಯಿತು ಮತ್ತು ಅದರು ಮೂಲ ಉದ್ದೇಶ ಧರ್ಮನಿಷ್ಠೆಯನ್ನು ಅನುಸರಿಸಬೇಕು ಎಂದಾಗಿತ್ತು ಮತ್ತು ಇದು ಉಪವಾಸದ ಉದ್ದೇಶವು ನಿಮಗೂ ಇದೆ, ನೀವು ಧರ್ಮನಿಷ್ಠೆಯನ್ನು (ತಖ್ವಾ) ಅನುಸರಿಸಬೇಕು, ಅಂದರೆ ನೀವು ತಪ್ಪು ವಿಷಯಗಳನ್ನು ತಪ್ಪಿಸಬೇಕು ಮತ್ತು ಒಳ್ಳೆಯ ವಿಷಯಗಳನ್ನು ಪಡೆದುಕೊಳ್ಳಬೇಕು ಮತ್ತು ಯೋಧನು ಗುರಾಣಿಯ ಹಿಂದೆ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುವಂತೆ ಪಾಪ ಮತ್ತು ತಪ್ಪುಗಳಿಂದ ನೀವು ನಿಮ್ಮನ್ನು ರಕ್ಷಿಸಿಕೊಳ್ಳಬೇಕು ಮತ್ತು ಗುರಾಣಿಯನ್ನು ಮುಂಭಾಗದಲ್ಲಿ ಇರಿಸುವ ಯೋಧನು ಕೇವಲ ತನ್ನನ್ನು ರಕ್ಷಿಸಿಕೊಳ್ಳುವುದಿಲ್ಲ ಬದಲಿಗೆ ಅವನು ಶತ್ರುಗಳ ಮೇಲೆ ಆಕ್ರಮಣ ಮಾಡುತ್ತಾನೆ. ಆದ್ದರಿಂದ, ನೀವು ತಖ್ವಾದ ಮಾರ್ಗಲ್ಲಿ ನಡೆಯುತ್ತಿದ್ದರೆ, ನೀವು ನಿಮ್ಮನ್ನು ರಕ್ಷಿಸಿಕೊಳ್ಳುವುದಲ್ಲದೆ ನೀವು ಸೈತಾನ ಮತ್ತು ಪೈಶಾಚಿಕ ಆಲೋಚನೆಗಳ ಮೇಲೆ ದಾಳಿ ಮಾಡಿ ಅವನನ್ನು ಕೊಲ್ಲುತ್ತೀರಿ. ಹಝ್ರತ್ ಪೈಗಂಬರ್(ಸ) ಹೇಳಿದರು, ಅಲ್ಲಾಹನು ನಿಮ್ಮನ್ನು ಹಸಿವಿನಲ್ಲಿ ಇರಿಸಲು ಬಯಸುವುದಿಲ್ಲ. (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಸೂಮ್, ಅಧ್ಯಾಯ ಮನ್ ಲುಮ್ ಯಾದ ಖೌಲ್ ಅಝ್ಝೂರ್...ಹದೀಸ್–1903)

ಉಪವಾಸದ ಮೂಲ ಉದ್ದೇಶ ದೇವಭಕ್ತಿಯನ್ನು ಕೈಗೊಳ್ಳುವುದಾಗಿದೆ. ಇಲ್ಲದಿದ್ದರೆ, ಉಪವಾಸದ ಉದ್ದೇಶವು ಕಳೆದುಹೋಗುತ್ತದೆ.

ಪ್ರಸ್ತುತ ಕಾಲದಲ್ಲಿ ಹೆಚ್ಚಿನ ಸಂಖ್ಯೆಯ ಮುಸ್ಲಿಮರು ಹಸಿವಿನಿಂದ ಬಳಲುವ ಪ್ರಶ್ನೆಯೇ ಇಲ್ಲ. ಸಾಮಾನ್ಯವಾಗಿ, ವಿಶೇಷವಾಗಿ ಶ್ರೀಮಂತರು, ಅವರು ಸೆಹ್ರಿ ಮತ್ತು ಇಫ್ತಾರಿಯನ್ನು ಉತ್ತಮ ಕ್ರಮದಲ್ಲಿ ತಿನ್ನುತ್ತಾರೆ. ಹೌದು, ಸುಹೂರ್ ಮತ್ತು ಇಫ್ತಾರ್‌ಗಳನ್ನು ಭರಿಸಲಾಗದ ಬಡ ಜನರೂ ಇದ್ದಾರೆ. ಅವರು ಉಪವಾಸದಲ್ಲಿ ಹಸಿವಿನಿಂದ ನೀರು ಕುಡಿಯುವುದನ್ನು ತಡೆದಿರುವುದೂ ಅವರು ತಖ್ವಾದ ಮಾರ್ಗಗಳನ್ನು ಸನ್ವೇಷಿಸಿದಾಗ ಮಾತ್ರ ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಸ್ವೀಕಾರಾರ್ಹವಾಗಿರುತ್ತದೆ. ಮತ್ತು ಅವರು ತಮ್ಮ ಆರಾಧನೆಗಳನ್ನು ಅಲಂಕರಿಸಲು ಪ್ರಯತ್ನಿಸುತ್ತಾರೆ. ಶ್ರೀಮಂತರು ತಮ್ಮ ಪ್ರದೇಶದ ಬಡವರ ಕಡೆಗೆ ವಿಶೇಷವಾಗಿ ರಮಝಾನ್ ಸಮಯದಲ್ಲಿ ಕಾಳಜಿ ವಹಿಸಬೇಕು ಎಂದು ನಾನು ಇಲ್ಲಿ ಹೇಳುತ್ತೇನೆ. ಇಫ್ತಾರ್‌ಗಳಲ್ಲಿ ಇಫ್ತಾರ್‌ಗಳನ್ನು ಆನಂದಿಸಲು ಕೇವಲ ಶ್ರೀಮಂತರನ್ನು ಒಟ್ಟುಗೂಡಿಸಬೇಡಿ, ಬದಲಿಗೆ ಬಡವರ ಇಫ್ತಾರ್‌ಗಳನ್ನು ಸಹ ಏರ್ಪಡಿಸಿ, ಮತ್ತು ಔತಣದ ರೂಪದಲ್ಲಿ ನಡೆಯುತ್ತಿರುವ ದೊಡ್ಡ ದೊಡ್ಡ ಇಫ್ತಾರ್ ಕೂಟಗಳನ್ನು ನಾನು ತೀರಾ ಬೆಂಬಲಿಸುವುದಿಲ್ಲ. ಇವೆಲ್ಲವೂ ಈಗ ತೋರಿಕೆ ಮತ್ತು ನವೀನಾಚಾರದ ರೂಪವಾಗಿಬಿಟ್ಟಿವೆ.

ರಮಝಾನಿನಲ್ಲಿ ಪವಿತ್ರ ಖುರ್‌ಆನ್ ಓದಲು, ಓದಿಸಲು, ಆಲಿಸಲು, ಇತರರನ್ನು ಆಲಿಸುವಂತೆ ಮಾಡಲು, ಆರಾಧನೆಗಳು ಮತ್ತು ದೇವಸ್ಮರಣೆ ಬಗ್ಗೆ ಗಮನಹರಿಸಬೇಕು. ಆರಾಧನೆಯ ಕಡೆಗೆ ಹೆಚ್ಚು ಗಮನ ನೀಡಬೇಕು, ಬದಲಿಗೆ ವಿವಿಧ ರೀತಿಯ ಕೆಲಸ ಮಾಡುವವರು ತಮ್ಮ ಕೆಲಸದಿಂದ ಬಂದು ಇಫ್ತಾರ್ ಔತಣವನ್ನು ತಿನ್ನುವುದರಲ್ಲಿ ನಿರತರಾಗುತ್ತಾರೆ ಮತ್ತು ಇಫ್ತಾರ್ ಔತಣಕೂಟವನ್ನು ಏರ್ಪಡಿಸುವವರು ಸಹ ಇದರ ಬಗ್ಗೆ ಗಮನ ನೀಡುವ ಬದಲು, ಅಂದರೆ ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳನ್ನು ಓದುವುದು ದೇವಸ್ಮರಣೆ ಆರಾಧನೆ ಕಡೆಗೆ ಗಮನ ನೀಡುವ ಬದಲು ವಿವಿಧ ರೀತಿಯ ಹಾಗೂ ಉತ್ತಮ ರೀತಿಯ ಇಫ್ತಾರ್‌ಗಳನ್ನು ಏರ್ಪಡಿಸಲು ಮತ್ತು ಜನರಿಂದ ವಾಹ್, ವಾಹ್ ಎಂದು ಹೇಳಿಸಿಕೊಳ್ಳುವಲ್ಲಿ ನಿರತರಾಗಿರುತ್ತಾರೆ. ಆದರೆ ಈ ವಿಷಯಗಳು ರಮಝಾನ್‌ನ ಉದ್ದೇಶವಲ್ಲ. ಇವು ಧರ್ಮನಿಷ್ಠೆಯಿಂದ ದೂರವಾಗುವ ವಿಷಯಗಳಾಗಿವೆ.

ಆದ್ದರಿಂದ, ಗುರಾಣಿಯಿಂದ ಪ್ರಯೋಜನ ಪಡೆಯಲು, ಗುರಾಣಿಯನ್ನು ಸರಿಯಾಗಿ ಬಳಸುವುದು ಸಹ ಅಗತ್ಯವಾಗಿದೆ, ಇಲ್ಲದಿದ್ದರೆ ಸೈತಾನವು ಬಲ, ಎಡ, ಮುಂಭಾಗ ಮತ್ತು ಹಿಂಭಾಗದಿಂದ ಆಕ್ರಮಣ ಮಾಡುತ್ತದೆ. ಅದರಿಂದ ನೀವು ಹೇಗೆ ಉಳಿಯುತ್ತೀರಿ? ತದನಂತರ ಈ ಸೈತಾನವು ಮನುಷ್ಯನನ್ನು ಸಹ ಗಾಯಗೊಳಿಸಬಹುದು. ಆದ್ದರಿಂದ ನಾವು ರಮಝಾನ್‌ನಲ್ಲಿ ಉಪವಾಸದ ಹಕ್ಕನ್ನು ಈಡೇರಿಸಲು ಪ್ರಯತ್ನಿಸಬೇಕು.

ಉಪವಾಸದ ಮೂಲ ಉದ್ದೇಶ ದೇವಭಕ್ತಿಯನ್ನು ಕೈಗೊಳ್ಳಲು ಪ್ರಯತ್ನಿಸಬೇಕು.

ಅಲ್ಲಾಹನಿಗಾಗಿ, ಕಾನೂನುಬದ್ಧ ವಿಷಯಗಳಿಂದಲೂ ತಡೆಯಿರಿ, ಆಗ ಅಲ್ಲಾಹನ ಕರುಣೆಯು ಖಂಡಿತವಾಗಿಯೂ ನಮ್ಮ ಮೇಲೆ ಇರುತ್ತದೆ, ಮತ್ತು ಅಲ್ಲಾಹನು ನಮ್ಮ ಸೈತಾನನನ್ನೂ ಬಂಧಿಸುತ್ತಾನೆ ಮತ್ತು ನಾವು ನಿಲ್ಲದೆ ಒಳ್ಳೆಯದನ್ನು ಮಾಡುವ ವಿಶಾಲ ಕ್ಷೇತ್ರವನ್ನು ದಾಟುತ್ತಲೇ ಇರುತ್ತೇವೆ. ಆರಾಧನೆಗಳ ಮತ್ತು ದೇವಸ್ಮರಣೆಯ ಕೋಟೆ ನಮ್ಮನ್ನು ಶೈತಾನನ ಹಲ್ಲೆಗಳಿಂದ ರಕ್ಷಿಸುವುದು.

ಶೈತಾನನನ್ನು ಬಹಳ ಕ್ಷುಲ್ಲಕವೆಂದು ಭಾವಿಸಬಾರದು. "ಅಲ್ಲಾಹನ ದಾಸರಲ್ಲಿ ಹೆಚ್ಚಿನವರು ನನ್ನ ಪ್ರೇರಣೆಗೆ ಒಳಪಟ್ಟು ನನ್ನನ್ನು ಹಿಂಬಾಲಿಸುವರು" ಎಂದು ಶೈತಾನನು ದೊಡ್ಡದಾಗಿ ಸವಾಲೊಡ್ಡಿ ಹೇಳಿದ್ದನು. ಆದ್ದರಿಂದ ನಾವು ರಮಝಾನಿನಲ್ಲಿ ಶೈತಾನನ ಈ ಪಂಥಾಹ್ವಾನದ ಎದುರಾಗಿ ಹೋರಾಡಬೇಕು. ಅನಂತರ ಆರಾಧನೆಗಳ ಮತ್ತು ಪವಿತ್ರ ಖುರ್‌ಆನಿನ ಆದೇಶಗಳ ಆಯುಧದಿಂದ ನಾವು ಶೈತಾನನ ವಿರುದ್ಧ ಸದಾ ಹೋರಾಡುತ್ತಿರಬೇಕು.

ಉಪವಾಸದ ನೈಜತೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಉಪವಾಸದ ನೈಜತೆ ಬಗ್ಗೆಯೂ ಜನರಿಗೆ ಅರಿವಿಲ್ಲ. ಮನುಷ್ಯನು ಹಸಿವಿನಿಂದಲೂ ಬಾಯಾರಿಕೆಯಿಂದಲೂ ಇರುವುದು ಮಾತ್ರ ಉಪವಾಸವಲ್ಲ. ಅದರ ಒಂದು ಯಥಾರ್ಥತೆ ಮತ್ತು ಒಂದು ಪ್ರಭಾವ ಅನುಭವದಿಂದ ಗೊತ್ತಾಗುತ್ತದೆ. ವ್ಯಕ್ತಿಯು ಎಷ್ಟು ಕಡಿಮೆ ತಿನ್ನುತ್ತಾನೋ ಅಷ್ಟೇ ಆತ್ಮ ಪರಿಶುದ್ಧಿ ಮತ್ತು ದೇವದರ್ಶನದ ಸಾಮರ್ಥ್ಯಗಳು ಉಂಟಾಗುತ್ತದೆ ಎಂಬುದು ಮನುಷ್ಯನ ಸಹಜ ಪ್ರಕೃತವಾಗಿದೆ. ಆದರೆ ದುರದೃಷ್ಟವಶಾತ್ ಇಂದಿನ ದಿನಗಳಲ್ಲಿ, ಉಪವಾಸವು ತಿನ್ನುವ ಮತ್ತು ಕುಡಿಯುವ ಹೆಸರಾಗಿದೆ. ಆದಾಗ್ಯೂ, ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ಒಂದು ವಿಧದ ಆಹಾರವನ್ನು ಕಡಿಮೆಗೊಳಿಸಿ ಮತ್ತೊಂದು ವಿಧದ ಆಹಾರವನ್ನು ವರ್ಧಿಸಲು ಅಲ್ಲಾಹನು ಉದ್ದೇಶಿಸುತ್ತಾನೆ. ಅಲ್ಲಾಹನ ಕಡೆಗೆ ಬಾಗುವಂತಾಗಲು ಮತ್ತು ಭೌತಿಕತೆಯಿಂದ ದೂರವಿರುವಂತಾಗಲು ಮನುಷ್ಯನು ಅಲ್ಲಾಹನ ಸ್ಮರಣೆಯಲ್ಲಿ ನಿರತನಾಗಿರಬೇಕು. ಅಂದರೆ ಸರ್ವಶಕ್ತನಾದ ಅಲ್ಲಾಹನ ಮೇಲೆ ಗಮನವಿರಬೇಕು ಮತ್ತು ಜಗತ್ತಿನಿಂದ ನಿರಾಸಕ್ತಿ ಇರಬೇಕು. ಆದ್ದರಿಂದ, ಉಪವಾಸ ಎಂದರೆ ಒಬ್ಬ ವ್ಯಕ್ತಿಯು ದೇಹವನ್ನು ಪೋಷಿಸುವ ಒಂದು ಆಹಾರವನ್ನು ಬಿಟ್ಟು ಆತ್ಮದ ತೃಪ್ತಿ ಮತ್ತು ನೆರವೇರಿಕೆಯ ಮೂಲವಾದ ಇನ್ನೊಂದು ಆಹಾರವನ್ನು ಪಡೆಯಬೇಕು. ಮತ್ತು ಸರ್ವಶಕ್ತನಾದ ಅಲ್ಲಾಹನಿಗಾಗಿ ಮಾತ್ರ ಉಪವಾಸ ಮಾಡುವವರು ಮತ್ತು ಅವುಗಳನ್ನು ಆಚರಣೆಯಾಗಿ ಇಟ್ಟುಕೊಳ್ಳದೆ, ಅವರು ಸರ್ವಶಕ್ತನಾದ ಅಲ್ಲಾಹನ ಸ್ತೋತ್ರ ಮತ್ತು ವೈಭವೀಕರಣದಲ್ಲಿ ನಿರತರಾಗಬೇಕು, ಇದರಿಂದ ಅವರಿಗೆ ಇತರ ಜೀವನಾಂಶವನ್ನು ಲಭಿಸಬಹುದು. (ಮಾಲ್ಫೂಝಾತ್, ಸಂಪುಟ–9, ಪುಟಗಳು 122–123, 1984)

ಆದ್ದರಿಂದ ರಮಝಾನಿನಲ್ಲಿ ಪವಿತ್ರ ಖುರ್‌ಆನ್ ಓದುವುದು ಮತ್ತು ಅದನ್ನು ಮನವರಿಕೆ ಮಾಡುವುದರ ಜೊತೆಗೆ ಆರಾಧನೆ ಮತ್ತು ದೇವಸ್ಮರಣೆ ಬಹಳ ಅಗತ್ಯ. ಹೃದಯವು ಅಲ್ಲಾಹನನ್ನು ಸ್ತುತಿಸುತ್ತಿರಬೇಕು ಮತ್ತು ಅವನ ಪರಿಶುದ್ಧಿಯನ್ನು ಕೊಂಡಾಡುತ್ತಿರಬೇಕು.

ಇದಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ತಿಳಿಸಿರುವ ಒಂದು ಇಲ್‌ಹಾಮೀ ದುಆ ಸಹ ಇದೆ. ಅದೇನೆಂದರೆ, **ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್**. ಇದೊಂದು ಬಹಳ ಮುಖ್ಯ ದುಆ ಆಗಿದೆ. (ತಿರ್‌ಯಾಖಿಲ್ ಖುಲೂಬ್, ರೂಹಾನಿ ಖಝಾಇನ್, ಸಂಪುಟ–15, ಪುಟ–208)

ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಹೇಳುವುದು ದುಆ ಸ್ವೀಕಾರಕ್ಕಾಗಿ ಅವಶ್ಯ. ಇದು ಅಲ್ಲಾಹನ ಆಜ್ಞೆಯಾಗಿದೆ. ಅಂತೆಯೇ, ಅಲ್ಲಾನ ಏಕತೆಯ ಅಭಿವ್ಯಕ್ತಿಯಾದ ತಹ್ಲೀಲ್ ಇದೆ. ಇದು ಕೂಡ ಬಹಳ ಮುಖ್ಯವಾಗಿದೆ. ಆದ್ದರಿಂದ ಇವು ಧರ್ಮನಿಷ್ಠೆಯಲ್ಲಿ ಪ್ರಗತಿಗೆ ಕಾರಣವಾಗುವ ಸಾಧನಗಳಾಗಿವೆ ಮತ್ತು ದುಆವಿನ ಸ್ವೀಕಾರಕ್ಕೂ ಮುಖ್ಯವಾಗಿವೆ. ಹಾಗಾಗಿ ಈ ಕಡೆ ವಿಶೇಷ ಗಮನ ಹರಿಸಬೇಕು.

ಪವಿತ್ರ ಖುರ್‌ಆನ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ಅನೇಕ ಸ್ಥಳಗಳಲ್ಲಿ ಧರ್ಮನಿಷ್ಠೆಯ ಮೇಲೆ ನಡೆಯಲು ಸಲಹೆ ನೀಡುತ್ತಾನೆ. ಪ್ರತಿ ಸತ್ಕರ್ಮವನ್ನು ಸಾಧಿಸಲು ತಖ್ವಾ ಒಂದು ಷರತ್ತಾಗಿದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಗಮನ ನೀಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ಸ್ಥಳಗಳಲ್ಲಿ, ಬಹುತೇಕ ಪ್ರತಿ ಸಭೆಯಲ್ಲೂ ಇದರ ಬಗ್ಗೆ ಗಮನ ಸೆಳೆದಿದ್ದಾರೆ. ನಿಮ್ಮ ಒಂದು ಕವನದ ಪಂಕ್ತಿಯು ಹೀಗಿದೆ:

**"ಹರ್ ಎಕ್ ನೇಕಿ ಕಿ ಜಡ್ ಏಹ್ ಇತ್ತಿಖಾ ಹೈ"**

ಅಂದರೆ ಎಲ್ಲಾ ಸದ್ಗುಣಗಳ ಮೂಲ (ಬೇರು) ತಖ್ವಾವಾಗಿದೆ...

ಈ ಪಂಕ್ತಿ ಬರೆದ ನಂತರವೇ ಅಲ್ಲಹನು ಅವರಿಗೆ ಇಲ್‌ಹಾಮ್ ಮೂಲಕ ಅದರ ಮುಂದೆಯ ಭಾಗವನ್ನು ಬರೆಸುತ್ತಾನೆ ಅದು ಹೀಗಿದೆ

**"ಅಗರ್ ಎಹ್ ಜಡ್ ರಹೀ ತೊ ಸಬ್ ಕುಛ್ ರಹಾ ಹೈ"**

ಅಂದರೆ ಈ ಬೇರು ಭದ್ರವಾಗಿ ಉಳಿದಿದ್ದರೆ ಇನ್ನಿತರ ಎಲ್ಲಾ ವಿಷಯಗಳು, ವ್ಯವಹಾರಗಳು ಉಳಿದಿರುತ್ತವೆ. (ಮಲ್‌ಫೂಝಾತ್, ಸಂಪುಟ-4, ಪುಟ-48, 1984)

ಆದುದರಿಂದ ಧರ್ಮನಿಷ್ಠೆಯು (ತಖ್ವ) ಅಲ್ಲಾಹನಿಗೆ ಇಷ್ಟವಾಗುತ್ತದೆ. ಧರ್ಮನಿಷ್ಠೆಯೇ (ತಖ್ವ) ಪ್ರತಿಯೊಂದು ಒಳ್ಳೆಯದಕ್ಕೂ ದಾರಿ ಮಾಡಿಕೊಡುತ್ತದೆ. ಈ ತಖ್ವದಿಂದಲೇ ಲೌಕಿಕ ಭೋಗಗಳಿಂದ ಶುದ್ಧಿಯಾಗುವುದು. ಮನುಷ್ಯನ ಎಲ್ಲಾ ದೈಹಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸುವುದು ಧರ್ಮನಿಷ್ಠೆಯೇ ಆಗಿದೆ. ಆದ್ದರಿಂದ, ಧರ್ಮನಿಷ್ಠೆಯನ್ನು ಸಂಪಾದಿಸುವುದು ಮುಮಿನ್‌ನ ಆದ್ಯ ಕರ್ತವ್ಯವಾಗಬೇಕು.

ನಾನು ಹೇಳಿದಂತೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಧರ್ಮನಿಷ್ಠೆಯ ವಿಷಯವನ್ನು ವಿವಿಧ ಶೈಲಿಗಳಲ್ಲಿ ವಿವರಿಸಿದ್ದಾರೆ. ಈ ನಿಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರವರ ಕೆಲವು ಅಧ್ಯಾಪನೆಗಳನ್ನು ಸಹ ನಾನು ಪ್ರಸ್ತುತಪಡಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಪವಿತ್ರ ಖುರ್‌ಆನ್‌ನ ಆರಂಭದಲ್ಲಿಯೇ ಹೇಳಿದೆ: **ಹುದಲ್ಲಿಲ್ ಮುತ್ತಖೀನ್** (ಅಲ್‌ಬಖರ:3) ಅಂದರೆ: ಭಯಭಕ್ತಿವುಳ್ಳವರಿಗೆ ಮಾರ್ಗದರ್ಶನವಾಗಿದೆ. ಆದ್ದರಿಂದ, ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಪ್ರಕಾರ ಮಾರ್ಗದರ್ಶನವನ್ನು ಪಡೆಯಲು ಭಯಭಕ್ತಿ (ತಖ್ವ) ಅವಶ್ಯಕವಾದ ತತ್ವವಾಗಿದೆ. ಅದೇ ರೀತಿಯಲ್ಲಿ, ಅಲ್ಲಾಹನು ಇನ್ನೊಂದು ಸ್ಥಳದಲ್ಲಿ ಹೇಳಿದನು, **ಲಾ ಯಮುಸ್ಸುಹು ಇಲ್ಲಲ್ ಮುತಹ್ಹರೂನ್** (ಅಲ್‌ವಾಖಿಅಃ: 80) ಪರಿಶುದ್ಧರಾದವರು ಹೊರತು ಬೇರೆ ಯಾರೂ ಅದನ್ನು ಸ್ಪರ್ಶಿಸಲಾರರು. ಹೀಗೆ ಬೇರೆ ಶಾಸ್ತ್ರಗಳಲ್ಲಿ ಯಾವುದೇ ಷರತ್ತು ಇಲ್ಲ. ಗಣಿತ, ಸಂಖ್ಯಾಶಾಸ್ತ್ರ, ಇತ್ಯಾದಿ ವಿಷಯಗಳಿವೆ, ಅದನ್ನು ಕಲಿಯುವವನು ಧರ್ಮನಿಷ್ಠನಾಗಿರಬೇಕು ಎಂಬ ಷರತ್ತು ಇಲ್ಲ ಬದಲಿಗೆ ಅವನು ಎಷ್ಟೇ ಅನೈತಿಕನಾಗಿದ್ದರೂ ಅವನು ಅದನ್ನು ಕಲಿಯಬಹುದು. "ಆದರೆ ಧರ್ಮದ ವಿಜ್ಞಾನದಲ್ಲಿ ಒಣ ತರ್ಕ ಮತ್ತು ತತ್ವಶಾಸ್ತ್ರವನ್ನು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ ಮತ್ತು ಆ ಸಂಗತಿಗಳು ಮತ್ತು ಜ್ಞಾನವನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ" ಎಂದು ಅವರು(ಅ) ಹೇಳಿದರು. ಕೆಟ್ಟ ಹೃದಯವನ್ನು ಹೊಂದಿರುವ ಮತ್ತು ಧರ್ಮನಿಷ್ಠೆಯಲ್ಲಿ ಭಾಗವಹಿಸುವುದಿಲ್ಲ ಮತ್ತು ನಂತರ ಧರ್ಮ ಮತ್ತು ಸತ್ಯಗಳ ಶಾಸ್ತ್ರಗಳು ಅವನ ನಾಲಿಗೆಯಲ್ಲಿ ಬಿಡುಗಡೆಯಾಗುತ್ತವೆ ಎಂದು ಹೇಳುತ್ತಾನೆ, ಅವನು ಸುಳ್ಳು ಹೇಳುತ್ತಾನೆ. ಧರ್ಮದ ಸತ್ಯಗಳು ಮತ್ತು ದೈವಜ್ಞಾನಗಳಿಂದ ಅವನು ಯಾವುದೇ ರೀತಿಯಲ್ಲಿ ಪಾಲನ್ನು ಪಡೆಯುವುದಿಲ್ಲ, ಬದಲಿಗೆ ಧರ್ಮದ ರಹಸ್ಯಗಳು ಮತ್ತು ಅಂಶಗಳಿಗೆ ಮುತ್ತಖಿ ಧರ್ಮನಿಷ್ಠನಾಗಿರುವುದು ಷರತ್ತಾಗಿದೆ. ಈ ಪರ್ಷಿಯನ್ ಕವಿತೆಯಲ್ಲಿಯು ಇದರ ಬಗ್ಗೆ ಹೇಳಲಾಗಿದೆ:

**ಅರೂಸೆ ಹಝ್ರತೆ ಫುರ್ಖಾನ್ ನಖಾಬ್ ಆಹಂಗ ಬರ್‌ದಾರದ್**
**ಕೆ ದಾರುಲ್ ಮುಲಕ್ ಮಾನೆ ರಾ ಕುನ್‌ದ ಖಾಲೀ ಝಿಹ್‌ರ ಗೌಗ್ರಾ**

ಅಂದರೆ: ಆಂತರಿಕ ಪಟ್ಟಣವು ಎಲ್ಲಾ ರೀತಿಯ ಶಬ್ದ ಮತ್ತು ಗದ್ದಲಗಳಿಂದ ಮುಕ್ತವಾದಾಗ ಫುರ್ಖಾನ್‌ನ ವಧು ತನ್ನ ಮುಸುಕನ್ನು ತೆರೆಯುತ್ತಾಳೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ, "ಈ ವಿಷಯವು ಉದ್ಭವಿಸುವವರೆಗೆ ಮತ್ತು ದಾರುಲ್ ಮುಲ್ಕ, ಅರ್ಥವು ಖಾಲಿಯಾಗುವುದಿಲ್ಲ." ಅಂದರೆ, ಲೌಕಿಕ ಕಲ್ಮಶಗಳಿಂದ ಹೃದಯದ ವಾಸಸ್ಥಾನವನ್ನು ಶುದ್ಧೀಕರಿಸುವುದು ಅವಶ್ಯಕವಾಗಿದೆ. ಅವುಗಳು ಅದರಿಂದ ಮುಕ್ತನಾಗದಿದ್ದರೆ ಯಾವುದೇ ಪ್ರಯೋಜನವಿಲ್ಲ. ಅವರು ಹೇಳಿದರು: "ಆ ಗೋಗ್ರ (ಸದ್ದು) ಯಾವುದು?" ಇದು ದುರಾಚಾರವಾಗಿದೆ, ಲೌಕಿಕತೆಯಾಗಿದೆ." ಹೌದು, ಕಳ್ಳನಂತೆ ಹೇಳಿಸಿದರೆ ಹೇಳುವುದು ಬೇರೆ ವಿಷಯವಾಗಿದೆ." ಅಂದರೆ: ಒಳ್ಳೆಯತನದ ಮಾತುಗಳನ್ನು ಒಬ್ಬ ವ್ಯಕ್ತಿಯು ಎಂದಾದರೂ ಹೇಳಿದರೆ, ಅದು ಇತರರ ಕದ್ದ ಮಾತುಗಳಾಗಿರುತ್ತವೆ, ಅವನ ಮಾತುಗಳಾಗಿರುವುದಿಲ್ಲ "ಆದರೆ ಯಾರು ಪವಿತ್ರಾತ್ಮದಿಂದ ಹೇಳುವವರು ಧರ್ಮನಿಷ್ಠೆಯನ್ನು ಹೊರತುಪಡಿಸಿ ಮಾತನಾಡುವುದಿಲ್ಲ.

ಎಲ್ಲಾ ಧಾರ್ಮಿಕ ಅಧ್ಯಯನಗಳಿಗೆ ಧರ್ಮನಿಷ್ಠೆಯು (ತಖ್ವ) ಕೀಲಿಯಾಗಿದೆ ಎಂಬುದನ್ನು ನೆನಪಿಡಿ. ಧರ್ಮನಿಷ್ಠೆ (ತಖ್ವ) ಇಲ್ಲದೆ ಮನುಷ್ಯ ಅವುಗಳನ್ನು ಕಲಿಯಲು ಸಾಧ್ಯವಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುವಂತೆ: **ಅಲಿಫ್ ಲಾಮ್ ಮೀಮ್; ಝಾಲಿಕಲ್ ಕಿತಾಬು ಲಾರೈಬ ಫೀಹೀ. ಹುದಲ್ಲಿಲ್ ಮುತ್ತಖೀನ್**. (ಅಲ್‌ಬಖರ: 2-3) ಇದು ಪರಿಪೂರ್ಣ ಗ್ರಂಥವಾಗಿದೆ. ಇದರಲ್ಲಿ ಸಂದೇಹವಿಲ್ಲ, ಭಯಭಕ್ತಿವುಳ್ಳವರಿಗೆ ಒಂದು ಮಾರ್ಗದರ್ಶನವಾಗಿದೆ. ಈ ಗ್ರಂಥವು ಭಯಭಕ್ತಿವುಳ್ಳವರಿಗೆ (ತಖ್ವ) ಮಾರ್ಗದರ್ಶನ ನೀಡುತ್ತದೆ. ಆ ಭಯಭಕ್ತಿವುಳ್ಳವರು ಯಾರು? **ಅಲ್ಲಝೀನ ಯುಮಿನೂನ ಬಿಲ್ ಗೈಬಿ** (ಅಲ್-ಬಖರಾ: 4) ಅವರಾದರೂ ಅದೃಶ್ಯ ವಿಚಾರಗಳಲ್ಲಿ ನಂಬಿಕೆಯುಳ್ಳವರೂ ಆಗಿದ್ದಾರೆ. ಅದೇನೆಂದರೆ, ದೇವರು ಇನ್ನೂ ಕಾಣಿಸುತ್ತಿಲ್ಲ." ಆದರೆ ಅವರಿಗೆ ಅಲ್ಲಾಹನಲ್ಲಿ ಯಾವುದೇ ಅನುಭವವಿಲ್ಲದಿದ್ದರೂ ಸರ್ವಶಕ್ತನಾದ ಅಲ್ಲಾಹನು ಇದ್ದಾನೆ ಎಂದು ನಂಬುತ್ತಾರೆ." ಮತ್ತು ಅವರು ನಮಾಝುನ್ನು ನಿಲ್ಲಿಸುತ್ತಾರೆ ಅಂದರೆ ನಮಾಝಿನಲ್ಲಿಯು ರುಚಿ ಉದ್ಭವಿಸುವುದಿಲ್ಲ. "ನಿಲ್ಲಿಸುವುದು ಎಂದರೆ ಅವರಿಗೆ ಇನ್ನೂ ಸಂಪೂರ್ಣ ರುಚಿ ಮತ್ತು ಆಸ್ವಾದವನ್ನು ಉದ್ಭವಿಸುವುದಿಲ್ಲ ಎಂದರ್ಥ. "ಅವರು ನಮಾಝುನ್ನು ಪದಗಳಲ್ಲದೆ, ರುಚಿ ಇಲ್ಲದೆ ಉಪದ್ರವಗಳಲ್ಲಿಯೇ ನಮಾಝುನ್ನು ನಿರ್ವಹಿಸುತ್ತಾರೆ ಮತ್ತು ನಾವು ನೀಡುವುದರಲ್ಲಿ ಅವರು ಖರ್ಚು ಮಾಡುತ್ತಾರೆ ಮತ್ತು ನಿಮಗೆ ಅಥವಾ ನಿಮಗಿಂತ ಮುಂಚೆ ಅವತೀರ್ಣವಾದುದುವುದರಲ್ಲಿಯೂ ಅವರು ವಿಶ್ವಾಸವಿಡುತ್ತಾರೆ. ಇವು ಭಯಭಕ್ತಿವುಳ್ಳವವರ ಆರಂಭಿಕ ಮಟ್ಟಗಳು ಮತ್ತು ಗುಣಲಕ್ಷಣಗಳಿವೆ ಎಂದು ಹೇಳುತ್ತಾರೆ." ಈ ವಿಷಯಗಳು ಒಬ್ಬ ವಿಶ್ವಾಸಿಯ ಪ್ರಾಥಮಿಕ ಮಟ್ಟಗಳಾಗಿವೆ, ಗುಣಲಕ್ಷಣಗಳಾಗಿವೆ. ಅವರು ಹೇಳುತ್ತಾರೆ "... ಇಲ್ಲಿ ಒಂದು ಆಕ್ಷೇಪ ಉದ್ಭವಿಸುವುದೇನೆಂದರೆ ಅವರು ದೇವನಲ್ಲಿ ವಿಶ್ವಾಸವಿಡುತ್ತಾರೆ, ಅವರು ನಮಾಝುನ್ನು ನಿರ್ವಹಿಸುತ್ತಾರೆ, ಖರ್ಚು ಮಾಡುತ್ತಾರೆ ಮತ್ತು ಹಾಗೆಯೇ ದೈವಿಕ ಗ್ರಂಥಗಳಲ್ಲಿ ವಿಶ್ವಾಸವಿಡುತ್ತಾರೆ. ಹಾಗಾದರೆ ಅದರ ಹೊರತಾಗಿ ಹೊಸ ಮಾರ್ಗದರ್ಶನ ಯಾವುದು?" ಇವೆಲ್ಲವನ್ನು ಮೊದಲೇ ಅನುಸರಿಸುತ್ತಿದ್ದರೆ ಇದಕ್ಕಿಂತ ಮುಂದೆ ಏನು ಸಾಧಿಸುವುದು." ಇದು ತಹಸೀಲ್ ಸಾಧಿಸಿದಂತಿದೆ." ಅಂದರೆ, ಹಿಂದಿನದನ್ನು ಮರಳಿ ಪಡೆಯುವುದು. ಅವರು ಹೇಳಿದರು, "...ಈ ಪ್ರಶ್ನೆಗೆ ಉತ್ತರವೆಂದರೆ ಈ ಪಠ್ಯಗಳು ಮತ್ತು ಈ ಪದಗಳು ವಿವರಿಸಿರುವ ಮಟ್ಟಿಗೆ ಮನುಷ್ಯನ ಪರಿಪೂರ್ಣ ನಡವಳಿಕೆ ಮತ್ತು ಜ್ಞಾನವನ್ನು ಸೂಚಿಸುವುದಿಲ್ಲ." ಈ ಆರಾಧನಾ ಕಾರ್ಯಗಳು ಖಂಡಿತವಾಗಿಯೂ ಸರಿಯಾಗಿವೆ. ಸರ್ವಶಕ್ತನಾದ ಅಲ್ಲಾಹನು ಅದನ್ನು ಮಾಡಿರಿ ಎಂದು ಆಜ್ಞಾಪಿಸುತ್ತಾನೆ, ಆದರೆ ಅದು ಅದರ ಪರಿಪೂರ್ಣತೆ ಅಲ್ಲ. ಅದು ಅಂತಿಮ ಗುರಿಯಲ್ಲ. ಇವು ಆರಂಭಿಕ ವಿಷಯಗಳಾಗಿವೆ ಅಂದರೆ ಸರ್ವಶಕ್ತನಾದ ಅಲ್ಲಾಹನನ್ನು ನಂಬುವುದು, ಅದೃಶ್ಯಗಳ ಮೇಲೆ ವಿಶ್ವಾಸವಿಡುವುದು, ನಮಾಝುನ್ನು ನಿರ್ವಹಿಸುವುದು, ನಮಾಝ್‌ಗಳು ಬಿದ್ದಾಗ ಗಮನ ಹರಿಸುವುದು, ಖರ್ಚು ಮಾಡುವುದು, ಒಳ್ಳೆಯ ಕಾರ್ಯಗಳಿಗೆ ಕಾರಣವಾಗುವ ಇವು ಪ್ರಾಥಮಿಕ ವಿಷಯಗಳಾಗಿವೆ. ಅವರು ಹೇಳಿದರು, "ಮಾರ್ಗದರ್ಶನದ ತೀವ್ರ ಬಿಂದು **ಯುಮಿನೂನ ಬಿಲ್‌ಗೈಬಿ** ಯ ತನಕ ಮಾತ್ರ ಇರುತ್ತಿದ್ದರೆ ದೈವಜ್ಞಾನ ಎಂದರೇನು?" ಮಾರ್ಗದರ್ಶನವು ಅದೃಶ್ಯ ವಿಷಯಗಳನ್ನು ನಂಬುವುದು ಎಂದಾದರೆ, ದೈವಜ್ಞಾನ ಎಂದರೇನು? ಅಲ್ಲಾಹನು ಹೇಗೆ ತಿಳಿಯಲ್ಪಡುವನು? "ಆದ್ದರಿಂದ, ಪವಿತ್ರ ಖುರ್‌ಆನ್‌ನ ಮಾರ್ಗದರ್ಶನವನ್ನು ಅನುಸರಿಸುವ ವ್ಯಕ್ತಿಯು ದೈವಜ್ಞಾನದ ಉನ್ನತ ಮಟ್ಟವನ್ನು ತಲುಪುತ್ತಾನೆ."

ನೀವು ದೈವಜ್ಞಾನವನ್ನು ಪಡೆಯಲು ಬಯಸಿದರೆ, ಪವಿತ್ರ ಖುರ್‌ಆನ್‌ನ ಮಾರ್ಗದರ್ಶನಗಳನ್ನು ಅಧ್ಯಾಯನ ಮಾಡಿರಿ. ಅವುಗಳನ್ನು ಅನುಸರಿಸಿರಿ. ಆಗ ದೈವಜ್ಞಾನದ ಸ್ಥಾನ ಪ್ರಾಪ್ತಿಯಾಗುತ್ತದೆ. ಮನುಷ್ಯನು ಅದೃಶ್ಯ ಜ್ಞಾನದಿಂದ ಹೊರಬರುತ್ತಾನೆ, ಮತ್ತು ಅವನು **ಯುಮಿನೂನ ಬಿಲ್-ಗೈಬ್**ನಿಂದ ವೀಕ್ಷಣೆಯ ಸ್ಥಿತಿಗೆ ಪ್ರಗತಿ ಹೊಂದುತ್ತಾನೆ, ಅವನು ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವದ ಬಗ್ಗೆ ಸಂಪೂರ್ಣ ಖಚಿತತೆಯ ಸ್ಥಾನವನ್ನು ಕಂಡುಕೊಳ್ಳುತ್ತಾನೆ.

ಆದ್ದರಿಂದ **ಯುಮಮಿನೂನ ಬಿಲ್ ಗೈಬಿ** ನಿಂದ ಹೊರಬರಲು ಪವಿತ್ರ ಖುರ್‌ಆನ್‌ನ ಆಜ್ಞೆಗಳನ್ನು ಅನುಸರಿಸುವುದು ಅವಶ್ಯಕವಾಗಿದೆ. ಅದೃಶ್ಯವಿರುವುದನ್ನು ಏಕೆ ನಂಬುತ್ತಾರೆ ಎಂಬ ಪ್ರಶ್ನೆಯನ್ನು ಪ್ರಸ್ತುತ ಕಾಲದಲ್ಲಿ ಜನರು ಕೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಯುವಕರು ಮತ್ತು ಮಕ್ಕಳಲ್ಲಿ ಏಕೆ ಎಂಬ ಪ್ರಶ್ನೆ ಬಹಳವಾಗಿ ಮೂಡುತ್ತದೆ. ನಮಗೆ ಗೊತ್ತಿಲ್ಲದ ವಿಷಯವನ್ನು ಏಕೆ ನಂಬಬೇಕು? ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ಅದೃಶ್ಯವಿರುವ ವಿಷಯಗಳ ಮೇಲೆ ನಂಬಿಕೆ ಇಡುವುದು ಆರಂಭಿಕ ರೂಪವಾಗಿದೆ. ನಿಮಗೆ ನೀಡಲಾದ ಈ ಗ್ರಂಥವನ್ನು ಅನುಸರಿಸಿರಿ. ಅದನ್ನು ನಂಬಿದ ನಂತರ ಅದನ್ನು ಅನುಸರಿಸುವುದು ಅವಶ್ಯಕವಾಗಿದೆ ಅದು ನಿಮ್ಮನ್ನು ಸರ್ವಶಕ್ತನಾದ ಅಲ್ಲಾಹನಿಗೆ ಸರಿಯಾದ ಮನ್ನಣೆಯನ್ನು ನೀಡುತ್ತದೆ. ಹಾಗಾಗಿ ಅದೃಶ್ಯದಿಂದ ಹೊರಬಂದು ನೋಡುವ ಸ್ಥಿತಿ ಉಂಟಾಗುತ್ತದೆ. ಇದು ಅದೃಶ್ಯದಿಂದ ಮಾತ್ರ ಸಂಭವಿಸುವುದಿಲ್ಲ, ಬದಲಿಗೆ ದೇವರು ಯಾರೆಂದು ಮನುಷ್ಯ ಸ್ವತಃ ಗಮನಿಸುತ್ತಾನೆ. ವಿಜ್ಞಾನಿಗಳು, ಸಂಶೋಧಕರು ಹೀಗೆ ಪ್ರಪಂಚದ ತತ್ವವೂ ಇದೇ ಆಗಿದೆ, ಪ್ರಯೋಗಗಳಲ್ಲಿ ಮೊದಲು ಊಹೆಯೊಂದು ರೂಪುಗೊಳ್ಳುತ್ತದೆ, ಅದರ ಆಧಾರದ ಮೇಲೆ ಸಂಶೋಧನೆ ನಡೆಯುತ್ತದೆ ಮತ್ತು ಅದು ನಿಜವೋ ಅಲ್ಲವೋ ಎಂಬುದು ತಿಳಿಯುವುದಿಲ್ಲ, ಆದರೆ ಪರಿಕಲ್ಪನೆಯಲ್ಲಿ ಆಧಾರವನ್ನು ಸೃಷ್ಟಿಸಲಾಗುತ್ತದೆ ಮತ್ತು ಅದರ ಮೇಲೆ ಸಂಶೋಧನೆ ಮಾಡಲಾಗುತ್ತದೆ ಎಂದು ನಮಗೆ ತಿಳಿದಿದೆ, ಆದರೆ ಸರ್ವಶಕ್ತನಾದ ಅಲ್ಲಾಹನು ನೀವು ಅದೃಶ್ಯದಲ್ಲಿ ವಿಶ್ವಾಸದ ಅಡಿಪಾಯವನ್ನು ಮಾಡಿದ ನಂತರ ಪವಿತ್ರ ಖುರ್‌ಆನ್‌ನ ಆದೇಶಗಳನ್ನು ಅನುಸರಿಸಿರಿ, ಶ್ರಮವಹಿಸಿರಿ, ಧ್ಯಾನ ಮಾಡಿರಿ, ನಂತರ ನೋಡಿ, ನೀವು ಸಹ ಗಮನಿಸುತ್ತೀರಿ ಎಂದು ಸರ್ವಶಕ್ತನು ಹೇಳುತ್ತಾನೆ.

ವಿಜ್ಞಾನಿಗಳು ತಮ್ಮ ಸ್ವಂತ ಸಂಶೋಧನೆಗಾಗಿ, ತೃಪ್ತಿಗಾಗಿ ಮಾತ್ರ ಸಂಶೋಧನೆ ಮಾಡುತ್ತಾರೆ ಮತ್ತು ಅವರು ತೃಪ್ತರಾದಾಗ ಅವರು ಜನರಿಗೆ

ಹೇಳುತ್ತಾರೆ, ಆದರೆ ಇಲ್ಲಿ ನಿರ್ಮಿಸಲಾದ ಕಲ್ಪನೆ ಮತ್ತು ನಂತರದ ಸಂಶೋಧನೆಯಿಂದ ಪ್ರತಿಯೊಬ್ಬ ಮನುಷ್ಯನು ಪ್ರಯೋಜನ ಪಡೆಯಬಹುದು. ಇದು ಇಸ್ಲಾಮಿನ ವಿಶಿಷ್ಟ ಗುಣವಾಗಿದೆ. ಇದು ಅದೃಶ್ಯದಲ್ಲಿ ವಿಶ್ವಾಸದ ನಿಜವಾದ ಸತ್ಯಾಂಶವಾಗಿದೆ.

ಅವರು ಹೇಳುತ್ತಾರೆ: "ಅದೇ ರೀತಿಯಲ್ಲಿ, ನಮಾಝಿನ ಆರಂಭಿಕ ಸ್ಥಿತಿಯು ಇಲ್ಲಿ ಹೇಳಿರುವಂತೆಯೇ ಇರುತ್ತದೆ, ಅವರು ನಮಾಝುನ್ನು ನಿಂತಿರುವಂತೆ ಮಾಡುತ್ತಾರೆ" ಖಿಯಾಮ್ ಅಂದರೆ ನಿಂತಿರುವಂತೆ ಮಾಡುವುದು. "ಅಂದರೆ ನಮಾಝ್ ಬಿದ್ದಿರುವಂತೆ ಇರುತ್ತದೆ. ಬೀಳುವುದು ಎಂದರೆ ಅದರಲ್ಲಿ ರುಚಿ ಮತ್ತು ಆನಂದ ಇರುವುದಿಲ್ಲ. ಉದಾಸೀನತೆ ಮತ್ತು ಗೊಂದಲದ ಸರಣಿ ಇರುತ್ತದೆ. ಆದ್ದರಿಂದ ಹಸಿವು ಮತ್ತು ಬಾಯಾರಿಕೆಯಿಂದ ಚಡಪಡಿಸುವ ವ್ಯಕ್ತಿಯಂತೆ ಆಹಾರ ಮತ್ತು ನೀರಿಗಾಗಿ ಓಡುವ ಯಾವುದೇ ಆಕರ್ಷಣೆ ಇಲ್ಲ, ಅದೇ ರೀತಿಯಲ್ಲಿ ಅವನು ನಮಾಝ್‌ಗೆ ಹುಚ್ಚನಂತೆ ಓಡುತ್ತಾನೆ, ಆದರೆ ಅವನು ಮಾರ್ಗದರ್ಶನ ಪಡೆದಾಗ ಈ ಪರಿಸ್ಥಿತಿ ಇನ್ನು ಮುಂದೆ ಇರುವುದಿಲ್ಲ. ಅದರಲ್ಲಿ ರುಚಿ ಇರುತ್ತದೆ. ನಮಾಝಿನಲ್ಲಿಯೂ ಆನಂದ ಮತ್ತು ರುಚಿ ಇರುತ್ತದೆ. "ಉಪದ್ರವಗಳ ಸರಣಿಯು ಕೊನೆಗೊಳ್ಳುತ್ತದೆ ಮತ್ತು ತೃಪ್ತಿ ಮತ್ತು ನೆಮ್ಮದಿಯ ಬಣ್ಣವು ಪ್ರಾರಂಭವಾಗುತ್ತದೆ." ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುಂದೆ ನುಡಿಯುತ್ತಾರೆ: ಒಬ್ಬ ವ್ಯಕ್ತಿಯ ಒಂದು ವಸ್ತು ಕಳೆದು ಹೋದಾಗ ಅವರು ಸ್ವಲ್ಪ ನಿಲ್ಲು ನಮಾಝಿನಲ್ಲಿ ಸ್ಮರಿಸಲಾಗುವುದು ಎಂದು ಹೇಳಿದನು. ಈ ನಮಾಝ್ ಪರಿಪೂರ್ಣರ ನಮಾಝ್ ಆಗಿರುವುದಿಲ್ಲ ಏಕೆಂದರೆ ಅದರಲ್ಲಿ ಸೈತಾನನು ಅವರಿಗೆ ಉಪದ್ರವಗೊಳಿಸುತ್ತಾನೆ." ಒಂದು ವಸ್ತು ಕಳೆದು ಹೋಗಿದೆ ಹಾಗೆ ಅದರ ನೆನಪು ಬರುತ್ತಿಲ್ಲ ನಮಾಝ್ ನಿರ್ವಹಿಸಿದರೆ ಅಲ್ಲಿ ನನ್ನ ಆಲೋಚನೆಗಳು ಅಲ್ಲಿ ಇಲ್ಲಿ ಹೋಗುತ್ತಲೇ ಇರುತ್ತವೆ, ಮತ್ತು ಅಂತಿಮವಾಗಿ ನಾನು ಅದನ್ನು ಎಲ್ಲಿ ಇರಿಸಿದೆ ಎಂಬುದನ್ನು ನೆನಪಿಸಿಕೊಳ್ಳಬಹುದು. ಈ ನಮಾಝ್ ಪರಿಪೂರ್ಣರ ನಮಾಝ್ ಅಲ್ಲ, ಇವು ಪೈಶಾಚಿಕ ಪಿಸುಮಾತುಗಳಾಗಿವೆ. "ಆದರೆ ಪರಿಪೂರ್ಣರ ದರ್ಜೆಯನ್ನು ಲಭಿಸಿದಾಗ ಆತನು ಸಂಪೂರ್ಣವಾಗಿ ನಮಾಝಿನಲ್ಲಿಯೇ ಇರುತ್ತಾನೆ. ಅಂದರೆ ಸರ್ವಶಕ್ತನಾದ ಅಲ್ಲಾಹನು ಸಾರ್ವಕಾಲಿಕ ಸ್ಮರಿಸಲ್ಪಡುತ್ತಾನೆ. "ಮತ್ತು ಸಾವಿರಾರು ರೂಪಾಯಿಗಳ ವ್ಯಾಪಾರ ಮತ್ತು ಲಾಭವೂ ಸಹ ಅದನ್ನು ತಡೆಯಲು ಸಾಧ್ಯವಿಲ್ಲ. ಭಯವು ಇರುತ್ತದೆ, ಸರ್ವಶಕ್ತನಾದ ಅಲ್ಲಾಹನನ್ನು ಸಹ ನೆನಪಿಸಿಕೊಳ್ಳಲಾಗುತ್ತದೆ. ಅದೇ ರೀತಿ ಉಳಿದ ಪರಿಸ್ಥಿತಿಗಳು ಸಹ ಕೇವಲ ಹೇಳುವ ಮಾತುಗಳಾಗಿರುವುದಿಲ್ಲ. ಬದಲಿಗೆ ಪ್ರಸ್ತುತ ಸ್ಥಿತಿಯು ಅದರಲ್ಲಿ ಉದ್ಭವಿಸುತ್ತದೆ ಮತ್ತು ಅದೃಶ್ಯದಿಂದ ದೃಶ್ಯಕ್ಕೆ ತಲುಪುತ್ತದೆ. ಈ ಮಟ್ಟಗಳು ಕೇವಲ ಹೇಳುವುದಕ್ಕಿಲ್ಲ." ನಾನು ಹೇಳಿರುವ ಈ ಮಟ್ಟಗಳು ಕೇವಲ ನಿರೂಪಣೆಗಾಗಿ ಅಲ್ಲ. ಖಂಡಿತವಾಗಿಯು ಇಲ್ಲ, ಇದು ಒಂದು ನಿಧಿಯಾಗಿದೆ ಅದನ್ನು ಕಳೆದುಕೊಳ್ಳಬೇಡಿ. ಇದು ನಿಮ್ಮ ಸ್ವಂತ ಮನೆಯಲ್ಲಿದೆ ಮತ್ತು ಸ್ವಲ್ಪ ಪ್ರಯತ್ನ ಮತ್ತು ಪರಿಶ್ರಮದಿಂದ ನೀವು ಅದನ್ನು ಪಡೆಯಬಹುದು. (ಮಲ್‌ಫೂಝಾತ್, ಸಂಪುಟ–9, ಪುಟಗಳು 151–154, 1984)

ಆದ್ದರಿಂದ ಇಂದು ಈ ಪರಿಸರದ ಪ್ರಯೋಜನವನ್ನು ಪಡೆದುಕೊಳ್ಳುವುದು ಮತ್ತು ಈ ನಿಧಿಯನ್ನು ಹೊರತೆಗೆಯಲು ಶ್ರಮಿಸುವುದು ನಮ್ಮ ಕೆಲಸವಾಗಿದೆ, ಇದರಿಂದ ನಾವು ಸಹ ಅಲ್ಲಾಹನ ಸಂತೃಪ್ತಿಯನ್ನು ಗಳಿಸಬಹುದಾಗಿದೆ.

ಅದೇ ರೀತಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಧರ್ಮನಿಷ್ಠರಾಗಿ ಮತ್ತು ಧರ್ಮನಿಷ್ಠೆಯನ್ನು ಅಳವಡಿಸಿಕೊಳ್ಳದ ಹೊರತು ದುಆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ನೆನಪಿಡಿರಿ. ಧರ್ಮನಿಷ್ಠೆಯಲ್ಲಿ (ತಖ್ವದಲ್ಲಿ) ಎರಡು ವಿಧವಿದೆ. ಒಂದು ಜ್ಞಾನಕ್ಕೆ ಸಂಬಂಧಿಸಿದ್ದು ಇನ್ನೊಂದು ಕ್ರಿಯೆಗೆ ಸಂಬಂಧಿಸಿದ್ದು. ಜ್ಞಾನಕ್ಕೆ ಸಂಬಂಧಿಸಿದಂತೆ, ಒಬ್ಬ ವ್ಯಕ್ತಿಯು ಧರ್ಮನಿಷ್ಠನಾಗುವವರೆಗೆ ಧರ್ಮದ ಜ್ಞಾನ ಹಾಗೂ ದೈವಜ್ಞಾನದ ಸಂಗತಿಗಳು ಬಹಿರಂಗಗೊಳ್ಳುವುದಿಲ್ಲ ಎಂದು ಹೇಳಲಾಗಿದೆ ಮತ್ತು ಕಾರ್ಯವನ್ನು ಕುರಿತು, ಒಬ್ಬನು ಧರ್ಮನಿಷ್ಠನಾಗುವವರೆಗೆ ನಮಾಝ್, ಉಪವಾಸ ಮತ್ತು ಇತರ ಆರಾಧನಾ ಕಾರ್ಯಗಳು ಅಪೂರ್ಣವಾಗಿರುತ್ತವೆ ಎಂದು ಹೇಳಲಾಗುತ್ತದೆ. ಸರ್ವಶಕ್ತನಾದ ಅಲ್ಲಾಹನ ಎರಡು ಆಜ್ಞೆಗಳಿವೆ ಎಂಬುದನ್ನು ನೆನಪಿಡಿ. ಮೊದಲನೆಯದು ಅವನೊಂದಿಗೆ (ಅಲ್ಲಾಹನೊಂದಿಗೆ) ಯಾರನ್ನೂ ಪಾಲುದಾರನನ್ನಾಗಿ ಮಾಡಬೇಡಿ. ಅವನ ಅಸ್ತಿತ್ವದಲ್ಲಿ ಅಲ್ಲ, ಅವನ ಗುಣಲಕ್ಷಣಗಳಲ್ಲಿ ಅಲ್ಲ, ಅವನ ಆರಾಧನಾ ಕಾರ್ಯಗಳಲ್ಲಿ ಅಲ್ಲ ಮತ್ತು ಎರಡನೆಯ ವಿಷಯವೆಂದರೆ ಮಾನವ ಜನಾಂಗದ ಬಗ್ಗೆ ಕರುಣೆಯನ್ನು ಹೊಂದಿರುವುದು. (ಮಲ್‌ಫೂಝಾತ್, ಸಂಪುಟ–9, ಪುಟ–164, 1984) ಅಲ್ಲಾಹನ ಹಕ್ಕುಗಳನ್ನು ಈಡೇರಿಸಿರಿ ಮತ್ತು ದಾಸರ ಹಕ್ಕುಗಳನ್ನು ಈಡೇರಿಸಿರಿ.

ಅದೇ ರೀತಿ ಅವರು(ಅ) ಹೇಳಿದರು, "ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ವ ಮೈಂಯತ್ತಖಿಲ್ಲಾಹ ಯಜ್‌ಅಲ್ಲಹೂ ಮಖ್ರಜಾ, ವ್ವಯರ್‌ಝುಖ್‌ಹು ಮಿನ್ ಹೈಸು ಲಾ ಯಹ್‌ತಸಿಬ್.** (ಅತ್ತಲಾಖ್:3–4) ಹೀಗೆ ಯಾರು ಧರ್ಮನಿಷ್ಠೆಯನ್ನು ಹೊಂದುತ್ತಾರೊ ಅವರಿಗೆ ಇಡೀ ಸರ್ವ ಲೋಕಗಳ ಅನುಗ್ರಹಗಳನ್ನು ಲಭಿಸುವಂತಾಗಿದೆ.

ಯಾರಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿಕೊಡುವನು. ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು. ಅವರು(ಅ) ಹೇಳಿದರು, "ನೆನಪಿಡಿ, ಒಬ್ಬ ಭಯಭಕ್ತಿವುಳ್ಳವನಿಗೆ ಎಂದಿಗೂ ಯಾರ ಅಗತ್ಯವೂ ಇರುವುದಿಲ್ಲ, ಆದರೆ ಅವನು ತನಗೆ ಬೇಕಾದುದನ್ನು ಅಲ್ಲಾಹನು ಕೇಳುವ ಮೊದಲು ಒದಗಿಸುತ್ತಾನೆ." ಭಯಭಕ್ತಿವುಳ್ಳವನಿಗೆ ಲೌಕಿಕ ಜೀವನೋಪಾಯವನ್ನು ನೀಡುತ್ತಾನೆ ಎಂದು ಸರ್ವಶಕ್ತನಾದ ಅಲ್ಲಾಹನು ವಾಗ್ದಾನ ನೀಡಿದ್ದಾನೆ. ಅವರು(ಅ) ಹೇಳಿದರು, "ನಾನು ಒಮ್ಮೆ ಅಲ್ಲಾಹನನ್ನು ದೈವದರ್ಶನದಲ್ಲಿ ಪ್ರತಿನಿಧಿಸುವಂತೆ ನೋಡಿದೆ. ಅವನು ನನ್ನ ಕುತ್ತಿಗೆಯ ಮೇಲೆ ಕೈಯಿಟ್ಟು ಹೇಳಿದನು. **ಜೆ ತೂ ಮೇರಾ ಹೋರಹೀಂ ಸಬ್ ಜಗ್ ತೇರಾ ಹೋ**

ಆದ್ದರಿಂದ ಇದು ಆ ಪಾಕವಿಧಾನವಾಗಿದೆ. ಅವರು ಹೇಳಿದರು, "ಹಾಗಾಗಿ ಇದು ಎಲ್ಲಾ ಪ್ರವಾದಿಗಳು, ಸಂತರು ಮತ್ತು ಧರ್ಮಸುಧಾರಕರಿಂದ ಪರೀಕ್ಷಿಸಲ್ಪಟ್ಟ ಪಾಕವಿಧಾನವಾಗಿದೆ." ನೀವೂ ಸಹ ಪ್ರಯತ್ನಿಸಿ.

ಅವರು ಹೇಳುತ್ತಾರೆ, "...ನಮ್ಮ ಸಮುದಾಯವು ಧಾರ್ಮಿಕತೆಯ ಹಾದಿಯಲ್ಲಿ ಹೆಜ್ಜೆ ಹಾಕಬೇಕು ಮತ್ತು ನಮ್ಮ ಶತ್ರುಗಳ ಸಾವಿನಿಂದ ಅನಗತ್ಯವಾಗಿ ಸಂತೋಷಪಡಬಾರದು. ಬನೀ ಇಸ್ರಾಈಲ್‌ನ ಶತ್ರುಗಳ ಬಗ್ಗೆ ತೌರಾತ್‌ನಲ್ಲಿ ಬರೆಯಲಾಗಿದೆ, ಅಲ್ಲಾಹನು ಹೇಳುತ್ತಾನೆ: "ಅವರು ದುಷ್ಟರಾಗಿದ್ದರಿಂದ ನಾನು ಅವರನ್ನು ನಾಶಮಾಡಿಸಿದ್ದೇನೆ. ನೀವು ಸಜ್ಜನರಾಗಿದ್ದೀರಿ ಎಂದಲ್ಲ." ನಿಮ್ಮ ಒಳ್ಳೆಯತನದಿಂದ ಶತ್ರುಗಳು ಕೊಲ್ಲಲ್ಪಟ್ಟಿಲ್ಲ, ಬದಲಿಗೆ ಅವರು ಅವರ ದುಷ್ಟತನದಿಂದ ಕೊಲ್ಲಲ್ಪಟ್ಟರು. "ಆದ್ದರಿಂದ ನೀವು ಸಜ್ಜನರಾಗಲು ಪ್ರಯತ್ನಿಸಿ." ಅವರು(ಅ) ಹೇಳಿದರು, ನನ್ನ ಒಂದು ಕವನದ ಚರಣವು ಹೀಗಿದೆ:

ಹರ್ ಇಕ್ ನೇಕೀಕಿ ಜಡ್ ಯೆಹ್ ಇತ್ತಿಖಾ ಹೈ
ಅಗರ್ ಯೆಹ್ ಜಡ್ ರಹೀ ತೊ ಸಬ್ ಕುಚ್ ರಹಾ ಹೈ

ಅಂದರೆ: ಎಲ್ಲಾ ಸದ್ಗುಣಗಳ ಮೂಲ (ಬೇರು) ತಖ್ವಾವಾಗಿದೆ... ಈ ಬೇರು ಭದ್ರವಾಗಿ ಉಳಿದಿದ್ದರೆ ಇನ್ನಿತರ ಎಲ್ಲಾ ವಿಷಯಗಳು, ವ್ಯವಹಾರಗಳು ಉಳಿದಿರುತ್ತವೆ.

ಮತ್ತೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "...ತಖ್ವಾ ಒಂದು ಪ್ರತ್ಯೌಷಧವಾಗಿದೆ, ಅದನ್ನು ಉಪಯೋಗಿಸುವವನು ಎಲ್ಲಾ ವಿಷಗಳಿಂದ ಮೋಕ್ಷ ಪಡೆಯುತ್ತಾನೆ. ಆದರೆ ಧರ್ಮನಿಷ್ಠೆ (ತಖ್ವ) ಪರಿಪೂರ್ಣವಾಗಿರಬೇಕು. ಧರ್ಮನಿಷ್ಠೆಯ (ತಖ್ವದ) ಒಂದು ಶಾಖೆಯ ಮೇಲೆ ಕಾರ್ಯನಿರ್ವಹಿಸುವುದು ಹಸಿವಿನಿಂದ ಬಳಲುವವನಿಗೆ ಕೇವಲ ಒಂದು ಧಾನ್ಯದ ಕಾಳನ್ನು ತಿನ್ನುವಂತೆ ಇದೆ. ನಿಸ್ಸಂಶಯವಾಗಿ, ಅದರ ತಿನ್ನುವುದು ಮತ್ತು ತಿನ್ನದಿರುವುದು ಸಮಾನವಾಗಿರುತ್ತದೆ. ಹಾಗೆಯೇ ಒಂದೇ ಒಂದು ಹನಿ ನೀರಿನಿಂದ ಬಾಯಾರಿಕೆ ನೀಗಿಸಲು ಸಾಧ್ಯವಿಲ್ಲ. ಇದು ಧರ್ಮನಿಷ್ಠೆಯ ವಿಷಯವಾಗಿದೆ. ಯಾವುದೇ ಒಂದು ಶಾಖೆಯ ಮೇಲಿನ ಕ್ರಮವನ್ನು ಸಮರ್ಥಿಸಲು ಸಾಧ್ಯವಿಲ್ಲ. ಆದ್ದರಿಂದ, ಧರ್ಮನಿಷ್ಠೆಯು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ಇನ್ನಲ್ಲಾಹ ಮಅಲ್ಲಝೀನತ್ತಖೌ** (ಅನ್ನಹಲ್: 129) ನಿಶ್ಚಯವಾಗಿಯು ಸರ್ವಶಕ್ತನಾದ ಅಲ್ಲಾಹನು ಭಯಭಕ್ತಿವುಳ್ಳವವರೊಂದಿಗೆ ಇದ್ದಾನೆ. (ಮಲ್‌ಫೂಝಾತ್, ಸಂಪುಟ–9, ಪುಟ–260–262, 1984) ಅಂದರೆ, ನಿಜವಾದ ಧರ್ಮನಿಷ್ಠೆ ಇದ್ದರೆ, ಸರ್ವಶಕ್ತನಾದ ಅಲ್ಲಾಹನು ಅದನ್ನು ತನ್ನ ಅನುಗ್ರಹದಿಂದ ವ್ಯಕ್ತಪಡಿಸುತ್ತಾನೆ ಮತ್ತು ಅವನ ಅನುಗ್ರಹವೂ ವ್ಯಕ್ತವಾಗುತ್ತದೆ. ಆದ್ದರಿಂದ ಇಂತಹ ತಖ್ವವನ್ನು (ಭಯಭಕ್ತಿಯನ್ನು) ನಾವು ಸಾಧಿಸಲು ಶ್ರಮಿಸಬೇಕು.

ಮತ್ತೆ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ವಿಷಯದ ಪುನರಾವರ್ತನೆ ಇರುತ್ತದೆ" ಅದೇ ವಿಷಯಗಳು ಮತ್ತೆ ಮತ್ತೆ ಬರುತ್ತಿವೆ, "ಆದರೆ ನಿರ್ಲಕ್ಷ್ಯದ ಕಾರಣ. ಒಂದೆಡೆ, ಉಪದೇಶಗಳು ಮತ್ತು ಸಲಹೆಗಳನ್ನು ಕೇಳಲಾಗುತ್ತದೆ ಮತ್ತು ತಖ್ವವನ್ನು ಸಾಧಿಸಲು ಹೃದಯದಲ್ಲಿ ಉತ್ಸಾಹವು ಉಂಟಾಗುತ್ತದೆ, ಆದರೆ ನಂತರ ನಿರ್ಲಕ್ಷ್ಯ ಸಂಭವಿಸುತ್ತದೆ. ಆದ್ದರಿಂದ, ನಮ್ಮ ಜಮಾಅತ್‌ನ ಸದಸ್ಯರು ಯಾವುದೇ ಸಂದರ್ಭದಲ್ಲೂ ಸರ್ವಶಕ್ತನಾದ ಅಲ್ಲಾನನ್ನು ಮರೆಯಬಾರದು, ಯಾವಾಗಲೂ ಅವನಿಂದಲೇ ಸಹಾಯವನ್ನು ಯಾಚಿಸಬೇಕು ಅದನ್ನು ಹೊರತು ಪಡಿಸಿ ಮನುಷ್ಯ ಏನೂ ಇಲ್ಲ ಎಂದು ಬಹಳವಾಗಿ ನೆನಪಿಟ್ಟುಕೊಳ್ಳಬೇಕು.

ಅವನು ಒಂದು ಕ್ಷಣದಲ್ಲಿ ನಾಶಪಡಿಸಬಹುದು ಎಂಬುದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ, ವಿವಿಧ ರೀತಿಯ ದುಃಖಗಳು ಮತ್ತು ತೊಂದರೆಗಳಿವೆ. ನಿರ್ಭೀತರಾಗಿರಲು ಯಾವುದೇ ಸ್ಥಳವಿಲ್ಲ. ಈ ಪ್ರಪಂಚದಲ್ಲಿಯೂ ನರಕವಿರಬಹುದು ಮತ್ತು ಮಹಾ ಸಂಕಟಗಳು ಸಂಭವಿಸಬಹುದು. ಅದನ್ನು

ಚೆನ್ನಾಗಿ ನೆನಪಿಟ್ಟುಕೊಳ್ಳಬೇಕು. "ಇತ್ತೀಚಿನ ದಿನಗಳಲ್ಲಿ ಪರಮಾಣು ಯುದ್ಧಗಳ ಬಗ್ಗೆ ಮಾತನಾಡಲಾಗುತ್ತಿದೆ, ಹಾಗಾಗಿ ಅದು ಕೂಡ ಒಂದು ರೀತಿಯ ನರಕವಾಗಿದೆ. ಅದರ ಹೊರತಾಗಿ, ಬಾಂಬ್‌ಗಳು ಬೆಂಕಿಯ ಚೆಂಡುಗಳಾಗಿವೆ. ಅಲ್ಲಾಹನು ತನ್ನ ಕೃಪೆಯಿಂದ ಈ ತೊಂದರೆಯನ್ನು ಹತೋಟಿಗೆ ತೆಗೆದುಕೊಂಡು ಹೋಗಲಾಡಿಸುವವರೆಗೆ ಯಾರ ಕಷ್ಟಕ್ಕೂ ಯಾರೂ ಸಹಾಯ ಮಾಡಲಾರರು ಮತ್ತು ಸಹಾನುಭೂತಿ ತೋರಲಾರರು ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು.

ಈ ಕಾರಣಕ್ಕಾಗಿ, ಪ್ರತಿಯೊಬ್ಬರೂ ಸರ್ವಶಕ್ತನಾದ ಅಲ್ಲಾಹನೊಂದಿಗೆ ರಹಸ್ಯ ಪ್ರದೇಶವನ್ನು ಸೃಷ್ಟಿಸಿಕೊಳ್ಳಬೇಕು." ಅಂದರೆ, ರಹಸ್ಯ ಸಂಬಂಧವನ್ನು ಇಟ್ಟುಕೊಳ್ಳಬೇಕು. "ಯಾವ ವ್ಯಕ್ತಿಯು ಧೈರ್ಯದಿಂದ ಪಾಪಗಳಲ್ಲಿ, ದುಷ್ಕೃತ್ಯಗಳಲ್ಲಿ ತಲ್ಲೀನನಾಗುತ್ತಾನೆ ಆತನು ಅಪಾಯಕಾರಿ ಪರಿಸ್ಥಿತಿಯಲ್ಲಿರುತ್ತಾನೆ. ಆತನಿಗೆ ಅಲ್ಲಾಹನ ಶಿಕ್ಷೆ ಕಾದಿದೆ. ನೀವು ಅತ್ಯುನ್ನತನಾದ ಅಲ್ಲಾಹನ ಕರುಣೆಯನ್ನು ಬಯಸಿದರೆ, ಧರ್ಮನಿಷ್ಠೆಯನ್ನು ಹೊಂದಿರಿ ಮತ್ತು ಅಲ್ಲಾನನ್ನು ಕೋಪಗೊಳ್ಳುವ ಎಲ್ಲಾ ವಿಷಯಗಳನ್ನು ತ್ಯಜಿಸಬಿಡಿ. ದೇವರ ಭಯದ ಸ್ಥಿತಿ ಇರುವವರೆಗೆ."

ಇದು ಬಹಳ ಮುಖ್ಯವಾದ, ಅಗತ್ಯವಾದ ವಿಷಯವಾಗಿದೆ. "ದೇವರಿಗೆ ಭಯಪಡುವ ಸ್ಥಿತಿ ಇಲ್ಲದಿದ್ದರೆ, ನಿಜವಾದ ತಖ್ವವನ್ನು ಪಡೆಯಲು ಸಾಧ್ಯವಿಲ್ಲ ಎಂದು ಅವರು(ಅ) ಹೇಳಿದರು. ಧರ್ಮನಿಷ್ಠರಾಗಲು ಪ್ರಯತ್ನಿಸಿ. ಧರ್ಮನಿಷ್ಠರಲ್ಲದವರು ನಾಶವಾದಾಗ, ಧರ್ಮನಿಷ್ಠರು ಮೋಕ್ಷವನ್ನು ಪಡೆಯುತ್ತಾರೆ. ಅಂತಹ ಸಮಯದಲ್ಲಿ ಅವರ ಅವಿಧೇಯತೆಯು ಅವರನ್ನು ಕೊಲ್ಲುತ್ತದೆ ಮತ್ತು ಅವರ ಧರ್ಮನಿಷ್ಠೆ ಅವರನ್ನು ಉಳಿಸುತ್ತದೆ. ಮನುಷ್ಯನು ತನ್ನ ಕುತಂತ್ರ, ಕಿಡಿಗೇಡಿತನ ಮತ್ತು ವಿಶ್ವಾಸಘಾತುಕತನದಿಂದ ತಪ್ಪಿಸಿಕೊಳ್ಳಲು ಬಯಸಿದರೆ, ಅವನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಲ್ಲಾಹನ ಅನುಗ್ರಹವಿಲ್ಲದೆ ಯಾವುದೇ ಮನುಷ್ಯನು ತನ್ನ ಪ್ರಾಣವನ್ನು ರಕ್ಷಿಸಲಾರನು, ತನ್ನ ಸಂಪತ್ತು ಮತ್ತು ಮಕ್ಕಳನ್ನು ರಕ್ಷಿಸಿಕೊಳ್ಳಲಾರನು. ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನೊಂದಿಗೆ ಅದೃಶ್ಯ ರೀತಿಯಲ್ಲಿ ಸಂಬಂಧವನ್ನು ಹೊಂದಿರಬೇಕು." ಆರಾಧನೆ ಮತ್ತು ದೈವಾಸ್ಮರಣೆ ಮತ್ತು ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವ ಮೂಲಕ ಸರ್ವಶಕ್ತನಾದ ಅಲ್ಲಾಹನೊಂದಿಗೆ ಅದೃಶ್ಯ ರೀತಿಯಲ್ಲಿ ಸಂಬಂಧವನ್ನು ಹೊಂದಬೇಕು. ಮತ್ತು ನಂತರ ಈ ಸಂಬಂಧವನ್ನು ದೃಢಗೊಳಿಸಿಕೊಳ್ಳಬೇಕು.

ಅಂದರೆ, ಹೀಗೆ ಅದು ಸ್ಥಿರವಾಗಿರಬೇಕು.

"ಬುದ್ಧಿವಂತನು ಈ ಸಂಬಂಧವನ್ನು ಕಾಪಾಡಿಕೊಳ್ಳುತ್ತಾನೆ ಮತ್ತು ಯಾರು ಈ ಸಂಬಂಧವನ್ನು ಉಳಿಸಿಕೊಳ್ಳುವುದಿಲ್ಲವೋ ಮೂರ್ಖನಾಗಿದ್ದಾನೆ ಮತ್ತು ತನ್ನ ಬುದ್ಧಿ ಶಕ್ತಿಯ ಬಗ್ಗೆ ಹೆಮ್ಮೆ ಪಡುವವನು ನಾಶವಾಗುತ್ತಾನೆ ಮತ್ತು ಎಂದಿಗೂ ಯಶಸ್ವಿಯಾಗುವುದಿಲ್ಲ. ನೋಡಿ! ಈ ಭೂಮಿ ಮತ್ತು ಆಕಾಶ ಮತ್ತು ಅವುಗಳಲ್ಲಿ ಕಾಣುವ ಎಲ್ಲವೂ, ಇಷ್ಟು ದೊಡ್ಡ ಕಾರ್ಖಾನೆಯಾಗಿದೆ, ಇದು ಸರ್ವಶಕ್ತನಾದ ಅಲ್ಲಾಹನ ರಹಸ್ಯ ಬೆಂಬಲವಿಲ್ಲದೆ ನಡೆಯಬಹುದೇ? ಅಸಾಧ್ಯ.

ಶಾಂತಿಯ ಸ್ಥಿತಿಯಲ್ಲಿ ಭಯಪಡುವವನು ಭಯದ ಸ್ಥಿತಿಯಲ್ಲಿ ರಕ್ಷಿಸಲ್ಪಡುವನು ಎಂಬುದನ್ನು ನೆನಪಿಡಿ. ಭಯದ ಸ್ಥಿತಿಯಲ್ಲಿ ಭಯಭೀತನಾಗುವುದು ಯಾವುದೇ ರೀತಿಯ ವಿಶೇಷತೆಯಲ್ಲ. ಅಂತಹ ಸಂದರ್ಭಗಳಲ್ಲಿ ಅವಿಶ್ವಾಸಿಗಳು, ಬಹುದೇವತಾವಾದಿಗಳು ಮತ್ತು ನಾಸ್ತಿಕರು ಸಹ ಭಯಪಡುತ್ತಾರೆ. ಅಂತಹ ಸಂದರ್ಭದಲ್ಲಿ ಫಿರ್‌ಔನ್‌ನು ಸಹ ಭಯಪಟ್ಟು ಹೇಳಿದನು **ಆಮನ್‌ತು ಅನ್ನಹೂ ಲಾ ಇಲಾಹ ಇಲ್ಲಲ್ಲಝೀ ಆಮನತ್ ಬಿಹೀ ಬನೂ ಇಸ್ರಾಈಲ ವ ಅನಾ ಮಿನಲ್ ಮುಸ್ಲಿಮೀನ್** (ಯೂನುಸ್:91) ಅಂದರೆ: 'ಇಸ್ರಾಈಲ್ ಸಂತತಿಗಳು ನಂಬುವ ದೇವನ ಹೊರತು ಬೇರೆ ದೇವನಿಲ್ಲವೆಂದು ನಾನು ನಂಬುತ್ತೇನೆ. (ದೇವನಿಗೆ) ಶರಣಾಗತರಾಗುವವರಲ್ಲಿ ನಾನು ಸೇರಿದವನಾಗಿದ್ದೇನೆ.' ಅವರು ಹೇಳಿದರು, "ಇದರಿಂದ ಅವನಿಗೆ ಎಷ್ಟೇ ಉಪಯೋಗವಾಯಿತು ಎಂದರೆ ಸರ್ವಶಕ್ತನಾದ ಅಲ್ಲಾಹನು ಹೇಳಿದನು ನಿನ್ನ ದೇಹವನ್ನು ನಾವು ಉಳಿಸುತ್ತೇವೆ, ಆದರೆ ನಾವು ಈಗ ನಿಮ್ಮ ಜೀವವನ್ನು ಉಳಿಸುವುದಿಲ್ಲ. ಅಂತಿಮವಾಗಿ, ಅಲ್ಲಾಹನು ಅವನ ದೇಹವನ್ನು ದಂಡೆಯ ಮೇಲೆ ಇರಿಸಿದನು. ಅವನು ಸಣ್ಣ ಎತ್ತರದ ವ್ಯಕ್ತಿಯಾಗಿದ್ದನು. ಆದ್ದರಿಂದ, ಒಬ್ಬ ವ್ಯಕ್ತಿಯು ಪಾಪ ಮತ್ತು ಅಧರ್ಮದ ಕಡೆಗೆ ಮುನ್ನಡೆದಾಗ, **ಲಾ ಯಸ್‌ತಖಿರೂನ ಸಾಅತವ್ವಲಾ ಯಸ್ತಖ್‌ದಿಮೂನ್** (ಅಲ್‌ಆ‌ರಾಫ್:35) ನ ವಿಷಯವಿದೆ." ಅಂದರೆ: ಹಾಗೆ ಅವರ ಕಾಲಾವಧಿ ಸಮೀಪಿಸಿದರೆ ಅದರಿಂದ ಒಂದು ಘಳಿಗೆಯಾದರೂ ಹಿಂದೆ ಅಥವಾ ಮುಂದೆ ಆಗಲು ಅವರಿಗೆ ಸಾಧ್ಯವಿಲ್ಲ. ಹೀಗಾಗಿ ಒಬ್ಬ ವ್ಯಕ್ತಿಯು ಈಗಾಗಲೇ ಸರ್ವಶಕ್ತನಾದ ಅಲ್ಲಾಹನೊಂದಿಗೆ ಸಂಬಂಧವನ್ನು ಹೊಂದಿರಬೇಕು. (ಮಲ್‌ಫೂಝಾತ್, ಸಂಪುಟ–9, ಪುಟ–369–370, 1984)

ಈ ರಮಝಾನ್‌ನಿಂದ ನಿಜವಾದ ಪ್ರಯೋಜನವನ್ನು ಪಡೆದುಕೊಳ್ಳುವ ಮತ್ತು ಸರ್ವಶಕ್ತನಾದ ಅಲ್ಲಾಹನು ನಮ್ಮಿಂದ ಬಯಸಿದ ಮಟ್ಟಕ್ಕೆ ತಖ್ವದ ಮಟ್ಟವನ್ನು ತರಲು ಪ್ರಯತ್ನಿಸುವ ನಾವು ಅದೃಷ್ಟವಂತರಾಗಿದ್ದೇವೆ.

ಪಠಿಸಲಾದ ವಚನಗಳಲ್ಲಿ ಎರಡನೇ ವಚನದಲ್ಲಿ ವ್ರತಾನುಷ್ಠಾನದ ಕುರಿತು ಕೆಲವು ಆಜ್ಞೆಗಳ ಪ್ರಸ್ತಾಪವಿದೆ. ನಿರ್ದಿಷ್ಟ ದಿನಗಳಲ್ಲಿ ಮಾತ್ರ ಅಲ್ಲಾಹನು ಉಪವಾಸವನ್ನು ಕಡ್ಡಾಯಗೊಳಿಸಿದ್ದರೂ ಕೂಡ ನಮಗೆ ಸೌಕರ್ಯವನ್ನು ನೀಡಿದ್ದಾನೆ. ಆದ್ದರಿಂದ ರೋಗಿ ಮತ್ತು ಯಾತ್ರಿಕ ಸ್ವತಃ ತನ್ನ ಮೇಲೆ ಭಾರ ಹೊರಿಸಬಾರದು ಮತ್ತು ರೋಗಶಮನವಾದ ನಂತರ ಅಥವಾ ಯಾತ್ರೆ ಮುಗಿಸಿದ ನಂತರ ಉಪವಾಸವನ್ನು ಪೂರ್ತಿ ಮಾಡಬೇಕು ಎಂದು ಹೇಳಿದ್ದಾನೆ. ಈ ಕಡ್ಡಾಯ ಉಪವಾಸವನ್ನು ಖಂಡಿತವಾಗಿಯೂ ಪೂರ್ತಿ ಮಾಡಬೇಕು. ಆದರೆ ಅನಾವಶ್ಯಕವಾದ ಭಾರವನ್ನು ಸ್ವತಃ ಹೊರಿಸಬಾರದು. ಸರ್ವಶಕ್ತನಾದ ಅಲ್ಲಾಹನು ಸಹ ನೈಸರ್ಗಿಕ ಮತ್ತು ತುರ್ತು ಒತ್ತಾಯಗಳನ್ನು ನೋಡಿಕೊಂಡಿದ್ದಾನೆ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಮಾನವನ ತಖ್ವವನ್ನು ಗೌರವಿಸುತ್ತಾನೆ, ಅವನು ಅಲ್ಲಾಹನ ಸಲುವಾಗಿ ಕಾನೂನುಬದ್ಧ ವಿಷಯಗಳಿಂದ ತನ್ನನ್ನು ತಾನು ನಿರ್ಬಂಧಿಸಿದನು, ಮನುಷ್ಯನ ಅನಿವಾರ್ಯದ ಸಂದರ್ಭದಲ್ಲಿ ಅವನಿಗೆ ಸೌಲಭ್ಯಗಳನ್ನು ಸಹ ಒದಗಿಸಿದನು. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ನಮ್ಮ ಮೇಲೆ ಬಹಳಷ್ಟು ಭಾರವನ್ನು ಹಾಕಿದ್ದಾನೆ ಎಂದು ಹೇಳುವವರಿಗೆ, ಪೂರೈಸಲು ತುಂಬಾ ಕಷ್ಟಕರವಾದ ಕೆಲವು ಆಜ್ಞೆಗಳಿವೆ. ಅಲ್ಲಾಹನ ಯಾವುದೇ ಆಜ್ಞೆಗಳು ಕಷ್ಟಕರವಾಗಿಲ್ಲ. ಎಲ್ಲದರೊಂದಿಗೂ ಸೌಲಭ್ಯಗಳೂ ಇವೆ. ಅಥವಾ ಧರ್ಮವು ನಮ್ಮ ಮೇಲೆ ಹೊರೆಯನ್ನು ಹಾಕುತ್ತದೆ, ಅಥವಾ ನಾಸ್ತಿಕರು ಅಥವಾ ಧರ್ಮದ ವಿರೋಧಿಗಳು, ಧರ್ಮದ ಅನುಯಾಯಿಗಳಲ್ಲಿ ಪ್ರಲೋಭನೆಯನ್ನು ಉಂಟುಮಾಡುವ ಸಲುವಾಗಿ, ನೀವು ಧರ್ಮದ ನಿರ್ಬಂಧಗಳಿಗೆ ಬದ್ಧರಾಗಿದ್ದರೆ ಅದು ನಿಮ್ಮ ಮಾನವ ಹಕ್ಕುಗಳನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಎಂದು ಹೇಳುತ್ತಾರೆ. ಈ ಆಯತ್‌ನಲ್ಲಿಯೂ ಆ ಜನರಿಗೆ ಉಪವಾಸ ಕಡ್ಡಾಯವಾಗಿದೆ ಎಂಬ ಉತ್ತರವಿದೆ. ಉಪವಾಸವು ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಸಾಧಿಸುವಂತೆ ಮಾಡುತ್ತದೆ, ಆದರೆ ಇದರ ಹೊರತಾಗಿಯೂ, ಸರ್ವಶಕ್ತನಾದ ಅಲ್ಲಾಹನು ನೈಸರ್ಗಿಕ ಬೇಡಿಕೆಗಳು ಮತ್ತು ಅಗತ್ಯಗಳನ್ನು ನೋಡಿಕೊಳ್ಳುತ್ತಾನೆ ಮತ್ತು ನಿಮಗೆ ಸೌಲಭ್ಯಗಳನ್ನು ನೀಡುತ್ತಾನೆ.

ಇಡೀ ವರ್ಷದಲ್ಲಿ ಯಾವುದೇ ಸಮಯದಲ್ಲಿ ನಿಮ್ಮ ಉಪವಾಸಗಳನ್ನು ಪೂರ್ಣಗೊಳಿಸಿ ಮತ್ತು ನಿಮ್ಮ ತಪ್ಪಿದ ಉಪವಾಸಗಳಿಗಾಗಿ ಸ್ವಲ್ಪ ಫಿದ್‌ಯದ ಆಜ್ಞೆ ನೀಡಲಾಗಿದೆ. ಆದರೆ ಇದು ಪ್ರತಿಯೊಬ್ಬರಿಗೆ ಅಲ್ಲ. ಬದಲಾಗಿ ಇದು ಆರ್ಥಿಕವಾಗಿ ಸಮರ್ಥರಾಗಿ ಇರುವವರಿಗೆ ಇರುವ ಆದೇಶವಾಗಿದೆ. ಅದರಿಂದ ದುಪ್ಪಟ್ಟು ಪ್ರತಿಫಲ ಲಭಿಸುತ್ತದೆ. ಇದು ಹೆಚ್ಚಿನ ಸತ್ಕರ್ಮವಾಗಿದೆ. ಅದೇ ರೀತಿಯಲ್ಲಿ ಮೊಲೆಯೂಣಿಸುವ ತಾಯಂದಿರು ಅಥವಾ ಸ್ಥಾಯಿ ರೋಗಿಗಳೊಡನೆ ಸಾಮರ್ಥ್ಯಕ್ಕೆ ಅನುಸಾರವಾಗಿ ಫಿದ್‌ಯ ನೀಡಲು ಆದೇಶಿಸಲಾಗಿದೆ. ಫಿದ್‌ಯ ನೀಡುವುದು ಉಪವಾಸಕ್ಕೆ ಬದಲಿಯಾಗಿದೆ ಎಂದು ಅಲ್ಲಾಹನು ಹೇಳುತ್ತಾನೆ. ಫಿದ್‌ಯದಿಂದ ಬಡವರ ನೆರವು ಆಗುತ್ತದೆ. ಇಲ್ಲೂ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದಕ್ಕೆ ಆರಾಧನೆಯ ಸ್ಥಾನವನ್ನು ನೀಡಲಾಗಿದೆ. ಇದಾಗಿದೆ ಇಸ್ಲಾಂ ಮುಂದಿರಿಸುವ ದೇವ. ಅವನು ಸಂಪೂರ್ಣ ಕಾರುಣ್ಯವಂತನಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಫಿದ್‌ಯವನ್ನು ಏಕೆ ನಿಶ್ಚಯಿಸಿರಬಹುದು ಎಂಬ ಯೋಚನೆ ನನಗೊಮ್ಮೆ ಉಂಟಾಯಿತು. ಶಕ್ತಿ ಲಭಿಸಲಿಕ್ಕಾಗಿ ಆಗಿದೆ ಎಂದು ನನಗೆ ಆಗ ಗೊತ್ತಾಯಿತು. ಮನುಷ್ಯನಿಗೆ ವ್ರತಾನುಷ್ಠಾನ ಮಾಡಲು ಸೌಭಾಗ್ಯ ಲಭಿಸಲು ಇದನ್ನು ನಿಶ್ಚಯಿಸಲಾಗಿದೆ.

ಅಲ್ಲಾಹನು ಸರ್ವ ಶಕ್ತಿಶಾಲಿಯಾಗಿದ್ದಾನೆ. ಅಸ್ತಮಾ ರೋಗಿಗೂ ಉಪವಾಸ ಅನುಷ್ಠಿಸುವ ಸೌಭಾಗ್ಯವನ್ನು ಅವನು ದಯಪಾಲಿಸಬಲ್ಲನು. ಒಟ್ಟಿನಲ್ಲಿ ಉಪವಾಸ ಇರಿಸಲು ಶಕ್ತಿ ಲಭಿಸಬೇಕು ಎಂಬುದೇ ಫಿದ್‌ಯದ ಉದ್ದೇಶವಾಗಿದೆ. ಇದು ಅಲ್ಲಾಹನ ಕೃಪೆಯಿಂದ ಆಗುತ್ತದೆ. ಆದ್ದರಿಂದ, ನನ್ನ ಪ್ರಕಾರ ಮನುಷ್ಯನು ಹೀಗೆ ದುಆ ಮಾಡಬೇಕು ಓ ಸರ್ವಶಕ್ತನಾದ ಅಲ್ಲಾಹನೇ, ಇದು ನಿನ್ನ ಅನುಗ್ರಹದಾಯಕ ಮಾಸವಾಗಿದೆ ಆದರೆ ಇದರಿಂದ ನಾನು ವಂಚಿತನಾಗುತ್ತಿದ್ದೇನೆ ಮತ್ತು ಮುಂದಿನ ವರ್ಷ ನಾನು ಬದುಕಿರುತ್ತೇನೆಯೇ ಅಥವಾ ಇಲ್ಲವೇ ಅಥವಾ ಈ ಬಿಟ್ಟು ಹೋದ ಉಪವಾಸಗಳನ್ನು ನಾನು ಪಾವತಿಸಬಹುದೇ ಅಥವಾ ಇಲ್ಲವೇ ಎಂದು ನನಗೆ ತಿಳಿದಿಲ್ಲ. ಮತ್ತು ಅವನು ಅವನಿಂದ ತೌಫೀಕ್ ಕೇಳಿದರೆ, ಸರ್ವಶಕ್ತನಾದ ಅಲ್ಲಾಹನು ಅಂತಹ ಹೃದಯಕ್ಕೆ ಶಕ್ತಿಯನ್ನು ನೀಡುತ್ತಾನೆ ಎಂದು ನನಗೆ ಖಾತ್ರಿಯಿದೆ. (ಮಲ್‌ಫೂಝಾತ್, ಸಂಪುಟ–4, ಪುಟ–258–259, 1984)

ಆದ್ದರಿಂದ, ವ್ರತಾನುಷ್ಠಾನಕ್ಕಾಗಿ ಪ್ರಯತ್ನಿಸಬೇಕು ಮತ್ತು ಫಿದ್ಯದ ಮೂಲ ಉದ್ದೇಶವು ಸಹ ಸರ್ವಶಕ್ತನಾದ ಅಲ್ಲಾಹನು ಅದನ್ನು ಸ್ವೀಕರಿಸುತ್ತಾನೆ ಮತ್ತು ವ್ರತಾನುಷ್ಠಾನಕ್ಕೆ ತೌಫೀಕ್ ನೀಡುತ್ತಾನೆ ಎಂಬ ಉದ್ದೇಶದಿಂದ ಪ್ರಯತ್ನಿಸಬೇಕು, ಆದರೆ ಸರ್ವಶಕ್ತನಾದ ಅಲ್ಲಾಹನು ನೀಡಿರುವ ರಿಯಾಯಿತಿಗಳಿಂದ ಪ್ರಯೋಜನ ಪಡೆಯುವುದು ಕೂಡ ತಖ್ವಾ ಆಗಿದೆ.

ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು ಪಾಲಿಸುವುದು ತಖ್ವ ಆಗಿದೆ.

ಈ ನಿಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೇಳುತ್ತಾರೆ: ನಿಜವೇನೆಂದರೆ, ಪವಿತ್ರ ಖುರ್‌ಆನ್ ನೀಡುವ ರಿಯಾಯಿತಿಗಳಿಂದ ಪ್ರಯೋಜನ ಪಡೆಯುವುದು ಕೂಡ ತಖ್ವಾ ಆಗಿದೆ. ಯಾತ್ರಿಕ ಮತ್ತು ರೋಗಿಗೆ ಬೇರೆ ದಿನಗಳಲ್ಲಿ ಉಪವಾಸ ಇರಿಸಲು ಅಲ್ಲಾಹನು ಅನುಮತಿ ಮತ್ತು ರಿಯಾಯಿತಿ ನೀಡಿದ್ದಾನೆ. ಈ ಆದೇಶವನ್ನು ಕೂಡ ಪಾಲಿಸಬೇಕು. ಪ್ರಯಾಣ ಅಥವಾ ಅನಾರೋಗ್ಯದ ಸಮಯದಲ್ಲಿ ಯಾರಾದರೂ ಉಪವಾಸ ಮಾಡಿದರೆ ಅದು ಪಾಪ ಎಂದು ಅನೇಕ ಹಿರಿಯರು ಬರೆದಿರುವುದನ್ನು ನಾನು ಓದಿದ್ದೇನೆ," ಅದು ಪಾಪವಾಗಿದೆ "ಏಕೆಂದರೆ ಉದ್ದೇಶವು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಗಳಿಸುವುದಾಗಿದೆ. ಅಲ್ಲಾಹನು ನೀಡಿರುವ ಆದೇಶಗಳನ್ನು ಅನುಸರಿಸಬೇಕು ಮತ್ತು ತನ್ನ ಕಡೆಯಿಂದ ನಿರ್ಲಕ್ಷಿಸಬಾರದು." ತಮ್ಮ ಸ್ವತಃ ನಿರ್ಮಿತ ವ್ಯಾಖ್ಯಾನಗಳನ್ನು ಮಾಡಬಾರದು. ಇಂದಿನ ವಿದ್ವಾಂಸರು ತಮ್ಮ ಜ್ಞಾನದ ಭ್ರಮೆಯಲ್ಲಿ ಮಾಡುತ್ತಲೇ ಇದ್ದಾರೆ. ಮತ್ತು ಈಗ ಅವರು ಸಾಮಾಜಿಕ ಮಾಧ್ಯಮದಲ್ಲಿ ಕಂಡುಕೊಂಡ ವೇದಿಕೆಗಳಲ್ಲಿ, ಈ ಜನರು ನ್ಯಾಯಶಾಸ್ತ್ರದ (ಫಿಖ) ಬಗ್ಗೆ ವಿಚಿತ್ರ ಮತ್ತು ತಮಾಷೆಯ ವಿಷಯಗಳು ಮತ್ತು ಫತ್ವಾಗಳನ್ನು ಹೊರಡಿಸಲು ಪ್ರಾರಂಭಿಸಿದ್ದಾರೆ. ಆದಾಗ್ಯೂ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಇದು ಅವನು ಆಜ್ಞಾಪಿಸಿದ್ದಾನೆ, **ಮನ್ ಕಾನ ಮಿನ್‌ಕುಮ್ ಮರೀಝುನ್ ಔ ಅಲಾ ಸಫರಿನ್ ಫಇದ್ದತುಮ್ಮಿನ ಅಯ್ಯಾಮಿನ್ ಉಖರ** (ಅಲ್‌ಬಖರ: 185) ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. ಉಪವಾಸ ಮಾಡಲು (ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ ಸಮರ್ಥರಿದ್ದರೆ) ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ.

(ಮಲ್‌ಫೂಝಾತ್, ಸಂಪುಟ–9, ಪುಟಗಳು 72–73, 1984)

ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುಂದೆ ಹೇಳುತ್ತಾರೆ: ಯಾವನಾದರೂ ರೋಗಿಯಾದ ಮತ್ತು ಯಾತ್ರಿಕನಾದ ಸ್ಥಿತಿಯಲ್ಲಿ ಉಪವಾಸ ಇರಿಸಿದರೆ ಆತನು ಅಲ್ಲಾಹನ ಸ್ಪಷ್ಟವಾದ ಆದೇಶದ ಉಲ್ಲಂಘನೆ ಮಾಡುತ್ತಾನೆ. ಮೋಕ್ಷವು ಅಲ್ಲಾಹನ ಅನುಗ್ರಹದಿಂದ ಲಭಿಸುತ್ತದೆ. ತಮ್ಮ ಸತ್ಕರ್ಮಗಳ ಬಲವನ್ನು ತೋರಿಸಿ ಮೋಕ್ಷವನ್ನು ಯಾರಿಗೂ ಗಳಿಸಲು ಸಾಧ್ಯವಲ್ಲ. ರೋಗಿ ಮತ್ತು ಯಾತ್ರಿಕ ಉಪವಾಸ ಇರಿಸಿದರೆ ಅಂಥವರು ಆದೇಶದ ಉಲ್ಲಂಘನೆ ಮಾಡಿದ್ದಾಗಿ ವಿಧಿಸಲಾಗುತ್ತದೆ. ಅಲ್ಲಾಹನ ಆದೇಶಗಳನ್ನು ಪಾಲಿಸುವುದೇ ತಖ್ವಾ ಆಗಿದೆ. (ಮಲ್‌ಫೂಝಾತ್, ಸಂಪುಟ–9, ಪುಟ–431, 1984)

ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ರಮಝಾನ್‌ನ ಮಾಸದಲ್ಲಿ ಪ್ರಯಾಣ ಮಾಡುವಾಗ ಉಪವಾಸ ಮತ್ತು ನಮಾಝಿನ ಬಗ್ಗೆ ಕೇಳಿದನು. ಅದಕ್ಕೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರು ಹೇಳಿದರು, ರಮಝಾನ್‌ನ ಮಾಸಲದಲ್ಲಿ ಪ್ರಯಾಣ ಮಾಡುವಾಗ ವ್ರತಾನುಷ್ಠಾನ ಮಾಡಬೇಡಿರಿ. ಅದಕ್ಕೆ ಆ ವ್ಯಕ್ತಿಯು ಹೇಳಿದನು: ಯಾ ರಸೂಲಲ್ಲಾಹ್(ಸ)!! ಉಪವಾಸ ಮಾಡುವ ಶಕ್ತಿ ನನಗಿದೆ. ಹಝ್ರತ್ ಪೈಗಂಬರ್(ಸ) ಅವನಿಗೆ ಹೇಳಿದರು, ನೀನು ಹೆಚ್ಚು ಶಕ್ತಿಶಾಲಿಯೇ ಅಥವಾ ಅಲ್ಲಾಹನು? ಅವರು ಹೇಳಿದರು:

ವಾಸ್ತವವಾಗಿ, ಸರ್ವಶಖ್ತನಾದ ಅಲ್ಲಾಹನು ನನ್ನ ಉಮ್ಮತ್ತಿನ ರೋಗಿಗಳು ಮತ್ತು ಪ್ರಯಾಣಿಕರಿಗೆ ರಮಝಾನ್‌ನಲ್ಲಿ ಉಪವಾಸ ಮಾಡದಿರಲು ಸದಖದ ರೀತಿಯಲ್ಲಿ ರಿಯಾಯಿತಿಯನ್ನು ನೀಡಿದ್ದಾನೆ. ನಿಮ್ಮಲ್ಲಿ ಯಾರಾದರೂ ನಿಮಗೆ ಉಡುಗೊರೆಯನ್ನು ನೀಡಿದರೆ ಆ ಉಡುಗೋರೆಯನ್ನು ಹಿಂದಿರುಗಿಸಲು ಇಷ್ಟಪಡುತ್ತೀರಾ. (ಕಂಝುಲ್ ಅಲ್‌ಮಾಲ್, ಭಾಗ–8, ಪುಟ–611, ಹದೀಸ್–24384, ಮಅಸ್ಸಸುರ್ರಿಸಾಲ ಬೈರುತ್ 1985)

ಆದ್ದರಿಂದ ತಖ್ವ ಎಂದರೆ ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು ಅನುಸರಿಸುವುದಾಗಿದೆ. ಯಾವ ಪುಣ್ಯಕಾರ್ಯವನ್ನು ಆ ಸಮಯದಲ್ಲಿ ಮಾಡಬೇಕೆಂದು ಆದೇಶಿಸುತ್ತಾನೋ ಆ ಸಮಯದಲ್ಲಿ ಮಾಡಬೇಕು ಮತ್ತು ಯಾವ ಸಮಯದಲ್ಲಿ ಅದನ್ನು ಮಾಡಬೇಡಿ ಎಂದು ಆದೇಶಿಸುತ್ತಾನೊ ಆ ಸಮಯದಲ್ಲಿ ಮಾಡಬಾರದು.

ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿಯಲ್ಲಿ ಚಲಿಸುತ್ತಾ ಈ ರಮಝಾನನ್ನು ತಖ್ವಾದಿಂದ ಕಳೆಯಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ನಮಗೆ ನಮ್ಮ ತಖ್ವಾದ ಮಟ್ಟವನ್ನು ಉನ್ನತಗೊಳಿಸಲು ಸೌಭಾಗ್ಯ ನೀಡಲಿ. ನಾವು ಸದಾ ಇಸ್ಲಾಮಿನ ಸುಂದರ ಅಧ್ಯಾಪನೆಗಳನ್ನು ಪಾಲಿಸುವವರಾಗಲಿ ಮತ್ತು ಈ ರಮಝಾನಿನಲ್ಲಿ ನಾವು ಅಲ್ಲಾಹನ ಧಾರಾಳ ಅನುಗ್ರಹಗಳನ್ನು ಗಳಿಸುವವರಾಗಲಿ. ಪ್ರತಿ ದಿನ ನಮಗಾಗಿ ಅನುಗ್ರಹಗಳನ್ನು ಮತ್ತು ಕಾರುಣ್ಯಗಳನ್ನು ತರಲಿ. ರಮಝಾನಿನಿಂದ ನಾವು ಯಥಾರ್ಥವಾಗಿ ಪ್ರಯೋಜನ ಪಡೆಯುವವರಾಗಲಿ. ಈ ರಮಝಾನ್ ನಮ್ಮನ್ನು ಅಲ್ಲಾಹನಿಗೆ ಅತ್ಯಂತ ಸಮೀಪಗೊಳಿಸಲಿ. ಸ್ವೀಕೃತಗೊಳ್ಳುವ ದುಆಗಳನ್ನು ಮಾಡಲು ನಮಗೆ ಸೌಭಾಗ್ಯ ಲಭಿಸಲಿ.

ಲೋಕದ ಎಲ್ಲ ಅಹ್ಮದಿಯರು ಜಮಾಅತಿನ ಅಭಿವೃದ್ಧಿಗಳಿಗಾಗಿ ಮತ್ತು ಎಲ್ಲ ಕಷ್ಟತೆಗಳು ದೂರವಾಗಲಿಕ್ಕಾಗಿಯೂ ದುಆ ಮಾಡಿರಿ. ಸರ್ಕಾರಗಳ ಮತ್ತು ಎಲ್ಲ ದುಷ್ಟರ ದ್ರೋಹಗಳಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ. ಅಲ್ಲಾಹನ ಮಾರ್ಗದಲ್ಲಿ ಜೈಲುವಾಸದಲ್ಲಿರುವವರ ಬಿಡುಗಡೆಗಾಗಿಯೂ ದುಆ ಮಾಡಿರಿ. ಅಲ್ಲಾಹನ ಹಸ್ತವನ್ನು ಹೇಗೆ ಹಿಡಿಯಬೇಕೆಂದರೆ, ನಾವು ಯಾವುದಾದರೂ ತಪ್ಪು ಮಾಡಿಕೊಂಡು ಆ ಹಸ್ತವನ್ನು ಬಿಟ್ಟುಹೋಗುವಂತೆ ಆಗದಿರಲು ದುಆ ಮಾಡಬೇಕು. ಅಲ್ಲಾಹನ ಅನುಗ್ರಹಗಳ ಮಳೆ ನಮ್ಮ ಮೇಲೆ ವರ್ಷಿಸುತ್ತಿರಲಿ.

ಮುಸ್ಲಿಂ ಲೋಕಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರಿಗೆ ಬುದ್ಧಿ ಮತ್ತು ತಿಳುವಳಿಕೆ ನೀಡಲಿ. ಆಗಮಿಸಿರುವ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯನ್ನು ಅವರು ನಂಬುವವರಾಗಲಿ.

ಯುದ್ಧಗಳ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯಲು ಕೂಡ ದುಆ ಮಾಡಿರಿ. ಮುಸ್ಲಿಂ ರಾಷ್ಟ್ರಗಳಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿರುವ ಯುದ್ಧಗಳ ಕಾರಣದಿಂದ ಮುಗ್ಧ ಜನಸಾಮಾನ್ಯರು ದೌರ್ಜನ್ಯದ ಬೀಸುಕಲ್ಲಲ್ಲಿ ಹುಡಿಯಾಗುತ್ತಿದ್ದಾರೆ. ಅಲ್ಲಾಹನು ಅವರ ಮೇಲೂ ಕೃಪೆದೋರಿ ಆ ದೌರ್ಜನ್ಯಗಾರರಿಂದ ಅವರನ್ನು ಮುಕ್ತಗೊಳಿಸಲಿ.

ಲೋಕದ ಪ್ರಚಲಿತ ಸ್ಥಿತಿಗತಿಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಯುದ್ಧ ಮತ್ತು ಅದರ ಅಪಾಯಕರ ಪರಿಣಾಮಗಳಿಂದ ರಕ್ಷಿಸಲಿ. ಯುದ್ಧ ನಡೆದರೆ ಅಹ್ಮದಿಯರ ಮೇಲೂ ಅದರ ಪ್ರಭಾವ ಉಂಟಾಗುವುದು ಎಂಬುದು ಸ್ಪಷ್ಟ. ಅಲ್ಲಾಹನು ಅವರನ್ನು ಅದರಿಂದ ರಕ್ಷಿಸಲಿ. ಅದರಿಂದ ರಕ್ಷಣೆ ಪಡೆಯಲಿಕ್ಕಾಗಿ ಪ್ರತಿಯೊಬ್ಬ ಅಹ್ಮದೀ ತನ್ನ ತಖ್ವಾದ ಮಟ್ಟವನ್ನು ಉನ್ನತಗೊಳಿಸಬೇಕಾಗುವುದು. ಇದನ್ನೇ ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ಅದರ ಸೌಭಾಗ್ಯವನ್ನೂ ಅಲ್ಲಾಹನು ನಮಗೆ ದಯಪಾಲಿಸಲಿ.

ಯು.ಕೆ.ಯಲ್ಲೂ ಮುಸ್ಲಿಮರ ಕಾರ್ಯಕ್ಷೇತ್ರವನ್ನು ಸಂಕುಚಿತಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ತೋರುತ್ತಿದೆ. ಅಲ್ಲಾಹನು ನಮ್ಮನ್ನೂ ಮತ್ತು ಇಲ್ಲಿಯ ಇತರ ಮುಸ್ಲಿಮರನ್ನೂ ಅದರ ದೋಷದಿಂದ ಸುರಕ್ಷಿತಗೊಳಿಸಲಿ – ಆಮೀನ್.

...*...*...*...

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ° ÄgÀÄÆEgï C£Àgï(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್' ನಿಂದ ಖುತ್‌ಬ ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

## ವಿಶೇಷ ಪ್ರಕಟಣೆ

**ಇಸ್ಲಾಮ್ ಧರ್ಮದ ಹಾಗೂ ಅದರ ವಿಶ್ವಾಸದ ಮೂಲ ಸ್ತಂಭಗಳನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೃತ್ಪೂರ್ವಕವಾಗಿ ನಂಬುತ್ತದೆ ಮತ್ತು ಅವುಗಳನ್ನು ಪಾಲಿಸುತ್ತದೆ.**

**ಸಂಪೂರ್ಣ ನಂಬಿಕೆ, ದೃಢವಿಶ್ವಾಸ ಹಾಗೂ ಪರಿಪೂರ್ಣ ಜ್ಞಾನದೊಂದಿಗೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಖಾತಮನ್ನಬಿಯೀನ್ ಎಂದು ನಂಬುತ್ತದೆ.**

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಿರುದ್ಧ ಪತ್ರಿಕೆಗಳಲ್ಲಿ ಸತ್ಯಕ್ಕೆ ವಿರುದ್ಧವಾದ ಲೇಖನಗಳನ್ನು ಪ್ರಕಟಿಸಲಾಗುತ್ತದೆ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಖಾತಮನ್ನಬಿಯೀನ್ ಎಂದು ನಂಬದೇ ಇರುವ ಕಾರಣದಿಂದ ಅದನ್ನು ಇಸ್ಲಾಮ್ ಧರ್ಮದ ವಲಯದಿಂದ ಹೊರ ಇಡಲಾಗಿದೆ ಎಂದೂ ಅದು ಬ್ರಿಟೀಷರ ಏಜೆಂಟ್ ಆಗಿದೆ ಎಂದೂ ಅದರ ವಿರುದ್ಧ ಪ್ರಚಾರ ಮಾಡಲಾಗುತ್ತದೆ. **(ನಊಧುಬಿಲ್ಲಾಹ್)**

ಪತ್ರಿಕೆಗಳಲ್ಲಿ ಪ್ರಕಟವಾಗುವ ಈ ಆರೋಪಗಳು ಅಪ್ಪಟ ಸುಳ್ಳು ಮತ್ತು ಆಧಾರರಹಿತವಾಗಿವೆ ಹಾಗೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕುರಿತು ಮಾಡಲಾಗುವ ದೊಡ್ಡ ಅಪಪ್ರಚಾರವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರನ್ನು ಖಾತಮನ್ನಬಿಯೀನ್ ಎಂದು ಸಂಪೂರ್ಣ ನಂಬಿಕೆ, ದೃಢವಿಶ್ವಾಸ, ಮತ್ತು ಪರಿಜ್ಞಾನದಿಂದ ನಂಬುತ್ತದೆ ಹಾಗೂ ಹಝ್ರತ್ ಪೈಗಂಬರರಿಗೆ(ಸ) ಸರ್ವಶಕ್ತನಾದ ಅಲ್ಲಾಹನು ನೀಡಿರುವ ಖಾತಮನ್ನಬಿಯೀನಿನ ಕಿರೀಟವನ್ನು ಕಿತ್ತುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲವೆಂದು ಅದು ಘೋಷಿಸುತ್ತದೆ.

ಅಹ್ಮದಿಯಾ ಜಮಾಅತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್(ಅ) ತಮ್ಮನ್ನು ಸ್ವತಃ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ಸಲ್ಲಮ್‌ರಿಗಿಂತ ಮಿಗಿಲು ಎಂದು ಭಾವಿಸುತ್ತಾರೆ ಎಂದು ಅದರ ವಿರೋಧಿಗಳು ಮತ್ತು ಅವರ ತಥಾಕಥಿತ ವಿದ್ವಾಂಸರು ಅದರ ವಿರುದ್ಧ ಇತರ ಮುಸ್ಲಿಮರ ಭಾವನೆಗಳನ್ನು ಕೆರಳಿಸಲು ಆಪಾದಿಸುತ್ತಾರೆ. ಇದೇ ಆಪಾದನೆಯನ್ನು ಈ ಜನರು ಇಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸದಸ್ಯರ ವಿರುದ್ಧವೂ ಹೊರಿಸುತ್ತಾರೆ. ಆದರೆ ಇದು ಅಪ್ಪಟ ಸುಳ್ಳು ಆಪಾದನೆಯಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ತಮ್ಮನ್ನು ಸ್ವತಃ ಖಾತಮುನ್ನಬಿಯ್ಯೀನ್‌ರಾದ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ನೈಜ ಸೇವಕ ಹಾಗೂ ಗುಲಾಮ ಎಂದು ಸಾರಿದ್ದಾರೆ ಮತ್ತು ತಮ್ಮ ಆಗಮನದ ಮೂಲೋದ್ದೇಶ ಇಸ್ಲಾಮ್ ಧರ್ಮ ಹಾಗೂ ಅದರ ಸ್ಥಾಪಕರಾದ ಹಝ್ರತ್ ಪೈಗಂಬರರ(ಸ) ವೈಭವ ಹಾಗೂ ಶ್ರೇಷ್ಠತೆಯನ್ನು ಸ್ಥಾಪಿಸುವುದಾಗಿದೆ ಎಂದು ಹೇಳಿದ್ದಾರೆ. ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದ ಘನತೆಯನ್ನು ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಷ್ಟು ಭವ್ಯವಾದ ರೀತಿಯಲ್ಲಿ ಕಾಪಾಡಿದರು ಎಂಬುದಕ್ಕೆ ಅವರ ಇಡೀ ಜೀವನವೇ ಸಾಕ್ಷಿ. ಅವರು ಪ್ರವಾದಿತ್ವದ ಘನತೆ ಮತ್ತು ದೇವನ ಏಕತ್ವದ ಹಿರಿಮೆಯನ್ನು ಸ್ಥಾಪಿಸಲಿಕ್ಕಾಗಿ ಮಾತು, ಕೃತ್ಯರೂಪದ ಮತ್ತು ಪ್ರಾಯೋಗಿಕವಾದ ಉದಾಹರಣೆಗಳನ್ನು ಸ್ಥಾಪಿಸಿದರು. ಮಾತ್ರವಲ್ಲ, ಅಹ್ಮದಿಯಾ ಖಿಲಾಫತಿನ ದೈವಿಕ ಮಾರ್ಗದರ್ಶನದ ಅಧೀನದಲ್ಲಿ ಇಡೀ ಜಗತ್ತಿನಲ್ಲಿ ರಸೂಲುಲ್ಲಾಹ್‌ರ(ಸ) ಮಹಿಮೆಯನ್ನು ಸ್ಥಾಪಿಸುವ ಸಕ್ರಿಯ ಜಮಾಅತನ್ನು ಸ್ಥಾಪಿಸಿದರು. ಅವರು ತಮ್ಮ ಗ್ರಂಥಗಳಲ್ಲಿ ನಾಮೂಸೆ ರಿಸಾಲತಿನ (ಪ್ರವಾದಿತ್ವದ ಘನತೆ) ಸ್ಥಾಪನೆ ಮತ್ತು ಶ್ರೇಷ್ಠತೆಯ ಬಗ್ಗೆ ಹೀಗೆ ಹೇಳುತ್ತಾರೆ:

"ಈಗ ಆಕಾಶದ ಕೆಳಗೆ ಒಬ್ಬರೇ ಪ್ರವಾದಿ ಇರುವರು ಮತ್ತು ಒಂದೇ ಗ್ರಂಥವಿರುವುದು. ಎಂದರೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು. ಅವರು ಸಕಲ ಪ್ರವಾದಿಗಳಲ್ಲಿ ಅತ್ಯುನ್ನತರೂ ಅತ್ಯುತ್ತಮರೂ ಅತ್ಯಂತ ಪರಿಪೂರ್ಣರೂ ಪ್ರವಾದಿಗಳ ಮುದ್ರೆಯೂ ಹಾಗೂ ಎಲ್ಲ ಮನುಷ್ಯರಿಗಿಂತ ಅತ್ಯುತ್ತಮರೂ ಆಗಿದ್ದಾರೆ. ಅವರನ್ನು ಅನುಸರಿಸುವುದರಿಂದ ಅತ್ಯುನ್ನತನಾದ ಅಲ್ಲಾಹನು ಲಭಿಸುವುದು ಮತ್ತು ಅಂಧಕಾರದ ಮುಸುಕುಗಳು ತೆರೆಯಲ್ಪಡುವುವು ಹಾಗೂ ಇಹಲೋಕದಲ್ಲೇ ನಿಜವಾದ ಮೋಕ್ಷದ ಚಿಹ್ನೆಗಳು ವ್ಯಕ್ತವಾಗುವುವು."

**(ಬರಾಹೀನೆ ಅಹ್ಮದಿಯಾ ಭಾಗ 4, ರೂಹಾನಿ ಖಝಾಯಿನ್ ಸಂಪುಟ 1, ಪುಟ 557–558, ಅಡಿಟಿಪ್ಪಣಿ ಸಂಖ್ಯೆ 3)**

ಅವರು ಹೀಗೂ ಹೇಳುತ್ತಾರೆ: "ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್. ಅವರ ನೆರಳಿನಲ್ಲಿ ಹತ್ತು ದಿನ ನಡೆಯುವುದರಿಂದ ಸಾವಿರಾರು ವರ್ಷಗಳ ವರೆಗೂ ಸಿಗದ ಪ್ರಕಾಶ ಲಭಿಸುವುದು." **(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 82)**

ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಅತ್ಯುನ್ನತ ಮತ್ತು ಶ್ರೇಷ್ಠ ಸ್ಥಾನದ ಬಗ್ಗೆ ಈ ಮಾತುಗಳನ್ನು ಹೇಳುತ್ತಿರುವ ವ್ಯಕ್ತಿ ಅಥವಾ ಅವರ ಜಮಾಅತ್ ಹೇಗೆ ತಾನೆ ಹಝ್ರತ್ ಪೈಗಂಬರರ(ಸ) ಮೇಲೆ ಬೇರೆಯವರಿಗೆ ಸ್ಥಾನವನ್ನು ಕಲ್ಪಿಸಿಕೊಳ್ಳಲು ಸಾಧ್ಯ? ಖಂಡಿತವಾಗಿಯೂ ಇಲ್ಲ, ಬದಲಿಗೆ ಇದು ಅಹ್ಮದಿಯಾ ಜಮಾಅತಿನ ವಿರುದ್ಧ ಅಪ್ಪಟ ಸುಳ್ಳು ಮತ್ತು ನಿರಾಧಾರ ಆರೋಪವಾಗಿದೆ.

ಇದಲ್ಲದೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟು ಬೆಳೆಸಿದ ಗಿಡವಾಗಿದೆ ಎಂಬ ಆಕ್ಷೇಪವೂ ಅದರ ವಿರುದ್ಧ ಹೊರಿಸಲಾಗುತ್ತದೆ. ಅದರ ವಿರುದ್ಧ ಹೊರಿಸಲಾಗುವ ಈ ಆಕ್ಷೇಪ ಕೂಡ ಪೂರ್ಣವಾಗಿಯೂ ತಪ್ಪಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮ ಬರಹಗಳಲ್ಲಿ ಎಲ್ಲಿಯೂ ಈ ಜಮಾಅತಿಗೆ ಬ್ರಿಟಿಷರೊಂದಿಗೆ ಸಂಬಂಧವಿರುವುದಾಗಿ ಹೇಳಿಲ್ಲ. ಇದಕ್ಕೆ ವಿರುದ್ಧವಾಗಿ, ಅವರು ತಮ್ಮ ಬರಹಗಳ ಮೂಲಕ ಕ್ರೈಸ್ತರನ್ನು ಧೈರ್ಯದಿಂದ ಎದುರಿಸಿದರು ಮತ್ತು ಕ್ರೈಸ್ತ ಧರ್ಮದ ಭಾಗವಾಗಿರುವ ಎಲ್ಲ ಸುಳ್ಳು ನಂಬಿಕೆಗಳನ್ನು ಖಂಡಿಸಿದರು. ಇದಲ್ಲದೆ, ಅವರು ಅನೇಕ ಆಂಗ್ಲೇಯ ಪಾದ್ರಿಗಳೊಂದಿಗೆ ಧಾರ್ಮಿಕ ಸಂವಾದಗಳನ್ನು ನಡೆಸಿ ಅವರನ್ನು ಪರಾಜಿತಗೊಳಿಸಿದರು. ಹೀಗಿರುವಾಗ ಕ್ರೈಸ್ತ ಧರ್ಮವನ್ನು ಮಿಥ್ಯೆ ಎಂದು ಸಾರಿದ ಅಹ್ಮದಿಯಾ ಜಮಾಅತನ್ನು ಆಂಗ್ಲೇಯರು ನೆಟ್ಟು ಬೆಳೆಸಿದ ಗಿಡವೆಂದು ಹೇಳುವುದು ಮೂರ್ಖತನವಲ್ಲದೇ ಮತ್ತೇನು?

ಹಾಗೆಯೇ ಅಹ್ಮದಿಯಾ ಜಮಾಅತ್ ಪರಿಶುದ್ಧ ಕಲಿಮವಾದ **ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್** (ಅಲ್ಲಾಹನಲ್ಲದೆ ಬೇರೆ ದೇವನಿಲ್ಲ. ಮುಹಮ್ಮದ್ ಅವನ ಪ್ರವಾದಿ) ಎಂಬುದನ್ನು, ಪವಿತ್ರ ಖುರ್‌ಆನ್ ಮತ್ತು ಹದೀಸನ್ನು ನಂಬುವುದಿಲ್ಲ ಎಂದು ಹೇಳುವುದು ಕೂಡ ಮಹಾ ಸುಳ್ಳಾರೋಪವಾಗಿದೆ. ಈ ಆಕ್ಷೇಪಣೆಗೆ ಪ್ರತಿಕ್ರಿಯೆಯಾಗಿ, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್‌ರ(ಅ) ಈ ಬರಹ ಸಾಕು. ಅವರು ಹೇಳುತ್ತಾರೆ:

"**ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್**. ಇದು ನಮ್ಮ ಧರ್ಮದ ಸಾರಾಂಶವಾಗಿದೆ. ನಾವು ನಂಬಿಕೊಂಡು ಬಂದಿರುವುದು ಮತ್ತು ದೇವನ ಅನುಗ್ರಹದಿಂದ ನಂಬುತ್ತಾ ಈ ನಶ್ವರ ಲೋಕದಿಂದ ನಾವು ಅಗಲಿ ಹೋಗಲಿರುವುದು ಈ ವಿಶ್ವಾಸದೊಂದಿಗೆ ಆಗಿದೆ. ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) **ಖಾತಮುನ್ನಬಿಯ್ಯೀನ್** (ಪ್ರವಾದಿಗಳ ಮುದ್ರೆ) ಮತ್ತು **ಖೈರುಲ್ ಮುರ್‌ಸಲೀನ್** (ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ) ಆಗಿದ್ದಾರೆ. ಅವರ ಹಸ್ತಗಳಿಂದ ಧರ್ಮವನ್ನು ಪರಿಪೂರ್ಣಗೊಳಿಸಲಾಗಿದೆ. ಪರಿಪೂರ್ಣತೆಗೆ ತಲುಪಿದ ಈ ಅನುಗ್ರಹದ ಮೂಲಕ ಮನುಷ್ಯನು ನೇರವಾದ ಮಾರ್ಗವನ್ನು ಅವಲಂಬಿಸಿ ದೇವನ ಸಮೀಪಕ್ಕೆ ತಲುಪಲು ಸಾಧ್ಯ. ಪವಿತ್ರ ಖುರ್‌ಆನ್ ಎಲ್ಲ ದೈವಿಕ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠವಾದುದು **(ಖಾತಮುಲ್ ಕುತುಬ್)** ಎಂದು ನಾವು ನಂಬುತ್ತೇವೆ. ಅದರ ಉಪದೇಶಗಳು, ಅದರ ಆಜ್ಞೆಗಳು, ಅದು ನಿಷಿದ್ಧಗೊಳಿಸಿದ ಕಾರ್ಯಗಳು, ಅದು ಕಡ್ಡಾಯಗೊಳಿಸಿದ ಕಾರ್ಯಗಳು – ಇವುಗಳಲ್ಲಿ ಒಂದಿಷ್ಟು ಕೂಡ ಹೆಚ್ಚು ಕಮ್ಮಿ

ಆಗಲಾರದು." (ಇಝ್ಹಾಲೇ ಔಹಾಮ್; ರೂಹಾನೀ ಖಝ್ಹಾಯಿನ್, ಸಂಪುಟ 3, ಪುಟ 169 – 170)

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಂಬಿಕೆಯ ಪ್ರಕಾರ, ಬನೀ ಇಸ್ರಾಈಲರಿಗೆ ಮಾರ್ಗದರ್ಶನ ನೀಡಲು ಕಳುಹಿಸಲ್ಪಟ್ಟಿದ್ದರು ಎಂದು ಪವಿತ್ರ ಖುರ್‌ಆನ್ ಹೇಳಿರುವ ಹಝ್ರತ್ ಈಸಾ ಮಸೀಹ್(ಅ) ಪವಿತ್ರ ಖುರ್‌ಆನಿನ ಸಾಕ್ಷ್ಯದ ಪ್ರಕಾರ ನಿಧನಗೊಂಡಿರುವರು. ಪವಿತ್ರ ಖುರ್‌ಆನಿನ 30ಕ್ಕೂ ಹೆಚ್ಚು ಸ್ಪಷ್ಟವಾದ ವಚನಗಳು ಈ ಸತ್ಯಕ್ಕೆ ಸಾಕ್ಷಿಯಾಗಿದೆ. **ಯಾ ಈಸಾ ಇನ್ನೀ ಮುತವಫ್ಫೀಕ** (ಪವಿತ್ರ ಖುರ್‌ಆನ್, 3:56) ಅಂದರೆ ಎಲೈ ಈಸಾ! ಖಂಡಿತವಾಗಿಯೂ ನಾನು ನಿನ್ನನ್ನು ಮೃತಪಡಿಸುವೆನು ಎಂದು ಅಲ್ಲಾಹನು ಹೇಳಿದ್ದಾಗಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ. ಅದೇ ರೀತಿಯಲ್ಲಿ **ಫಲಮ್ಮಾ ತವಫ್ಫೈತನೀ** (ಪವಿತ್ರ ಖುರ್‌ಆನ್, 5:118) ಅಂದರೆ, ನೀನು (ಅಲ್ಲಾಹನು) ನನಗೆ ಮರಣ ನೀಡಿದಾಗ ಎಂದು ಹಝ್ರತ್ ಈಸಾ(ಅ) ಹೇಳುವುದಾಗಿಯೂ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪವಿದೆ. ಅದೇ ರೀತಿ ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಬಗ್ಗೆ ಈ ರೀತಿ ಹೇಳಿದೆ, **ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್ ಖಬ್ಲಿಹಿರ್ರುಸುಲ್** (ಪವಿತ್ರ ಖುರ್‌ಆನ್, 3:145) ಅಂದರೆ ಹಝ್ರತ್ ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಖಾತಮನ್ನಬಿಯೀನ್ ಹಝ್ರತ್ ಮುಹಮ್ಮದ್(ಸ) ಈ ನಶ್ವರ ಪ್ರಪಂಚವನ್ನು ಬಿಟ್ಟು ಹೋಗಿರುವಾಗ ಬೇರೊಬ್ಬ ಪ್ರವಾದಿಯನ್ನು ಜೀವಂತವಾಗಿ ಇರಿಸುವುದರಲ್ಲಿ ಇರುವ ರಹಸ್ಯವಾದರೂ ಏನು? ಹಝ್ರತ್ ಮುಹಮ್ಮದ್ ಮುಸ್ತಫಾರಿಗಿಂತ(ಸ) ಮುಂಚಿನ ಎಲ್ಲ ಪ್ರವಾದಿಗಳು ಮೃತಪಟ್ಟಿರುವರು ಎಂಬುದರ ಬಗ್ಗೆ ಎಲ್ಲ ಸಹಾಬಿಯರು ಒಮ್ಮತಾಭಿಪ್ರಾಯ ಹೊಂದಿದ್ದರು ಎಂಬುದಕ್ಕೆ ಹದೀಸ್ ಮತ್ತು ಚರಿತ್ರೆಯ ಗ್ರಂಥಗಳಲ್ಲಿ ಪುರಾವೆಗಳಿವೆ. ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ನಿಧನಗೊಂಡಾಗ ಹಝ್ರತ್ ಉಮರ್(ರ) ತನ್ನ ಖಡ್ಗವನ್ನು ಎತ್ತಿ "ಯಾರಾದರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನಗೊಂಡಿರುವರು ಎಂದು ಹೇಳಿದರೆ ಅವರ ತಲೆಯನ್ನು ಕತ್ತರಿಸುವೆನು ಎಂದು ಹೇಳಿದಾಗ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಇದೇ ವಚನವನ್ನು ಪಠಿಸಿದ್ದರು. ಅಂದರೆ ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಪ್ರವಾದಿಗಳು ಗತಿಸಿದ್ದಾರೆ.

ಇಸ್ಲಾಮ್ ಪರಿಪೂರ್ಣ ಧರ್ಮವಾಗಿದೆ ಎಂಬುದನ್ನು ನೆನಪಿಡಿರಿ. ಆದಾಗ್ಯೂ ಮುಸ್ಲಿಮರ ದುರವಸ್ಥೆಯ ಬಗ್ಗೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಭವಿಷ್ಯ ನುಡಿದಿದ್ದರು: ಈಮಾನ್ ಕೃತ್ತಿಕಾ ನಕ್ಷತ್ರಕ್ಕೆ ಹೊರಟುಹೋಗುವ ಸಮಯ ಬರುವುದು (ಎಂದರೆ ಸತ್ಯವಿಶ್ವಾಸ ಜನರ ಹೃದಯಗಳಲ್ಲಿ ಇಲ್ಲವಾಗುವ ಸಮಯ) ಆಗ ಪರ್ಶಿಯಾದ ಓರ್ವ ವ್ಯಕ್ತಿ ಈಮಾನನ್ನು ಜಗತಿಗೆ ಮರಳಿ ತರುವನು (ಸಹೀಹ್ ಬುಖಾರಿ)

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸಂಸ್ಥಾಪಕ, ಹಝ್ರತ್ ಮಿರ್ಝಾ ಗ್ಹುಲಾಮ್ ಅಹ್ಮದ್ ಸಾಹಿಬ್, ವಾಗ್ದಾತ್ತ ಮಸೀಹ್ ಹಾಗೂ ಮಹ್‌ದಿ ಅಲೈಹಿಸ್ಸಲಾಮ್ ಯಾವುದೇ ಪ್ರತ್ಯೇಕ ಪ್ರವಾದಿತ್ವ ಅಥವಾ ನಿಯಮಸಂಹಿತೆಯನ್ನು ತಂದದ್ದಾಗಿ ವಾದಿಸಿಲ್ಲ. ಬದಲಾಗಿ ಸೂರಾ ಅನ್ನಿಸಾದ ವಚನದ ಪ್ರಕಾರ, ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಪರಿಪೂರ್ಣ ವಿಧೇಯತೆ ಮತ್ತು ಪರಿಪೂರ್ಣ ಅನುಸರಣೆಯ ಪರಿಣಾಮವಾಗಿ ಹಾಗೂ ಹಝ್ರತ್ ಪೈಗಂಬರರ(ಸ) ನೈಜ ಸೇವಕ ಮತ್ತು ಗುಲಾಮರಾಗಿದ್ದ ಕಾರಣದಿಂದ ಅವರಿಗೆ ಪ್ರವಾದಿತ್ವದ ಸ್ಥಾನ ಲಭಿಸಿತು. ಇದು ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಮಹಿಮೆಯನ್ನು ಹೆಚ್ಚಿಸುತ್ತದೆ. ಹಝ್ರತ್ ಪೈಗಂಬರರ(ಸ) ಅಸ್ತಿತ್ವವು ಒಬ್ಬ ಪ್ರವಾದಿಯನ್ನು ಸೃಷ್ಟಿಸುವಂಥದ್ದಾಗಿದೆ. ಅಂದರೆ, ಹಝ್ರತ್ ಪೈಗಂಬರರನ್ನು(ಸ) ಪರಿಪೂರ್ಣವಾಗಿ ಅನುಸರಿಸುವ ಮೂಲಕ ಒಬ್ಬ ಅನುಯಾಯಿ ಪ್ರವಾದಿತ್ವದ ಸ್ಥಾನಮಾನವನ್ನು ಪಡೆಯಬಹುದಾಗಿದೆ.

ಆದ್ದರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಅದರ ಸಂಸ್ಥಾಪಕರ ಮೇಲೆ ಸುಳ್ಳಾರೋಪ ಹೊರಿಸುವವರು ತಮ್ಮ ಅಸೂಯೆ ಮತ್ತು ಮತಾಂಧತೆಯನ್ನು ತೊರೆದು ವಾಗ್ದತ್ತ ಮಹ್‌ದಿ ಮತ್ತು ಮಸೀಹ್‌ರಾದ ಹಝ್ರತ್ ಮಿರ್ಝಾ ಗ್ಹುಲಾಂ ಅಹ್ಮದ್‌ರ(ಅ) ಬರಹಗಳ ಮತ್ತು ಅಹ್ಮದಿಯಾ ಜಮಾಅತಿನ ನಂಬಿಕೆಗಳ ಕುರಿತು ಗಮನವಿಟ್ಟು ಆಲೋಚಿಸಬೇಕು ಮತ್ತು ಅನ್ವೇಷಣೆ ಹಾಗೂ ಪರಿಪೂರ್ಣ ಜ್ಞಾನವಿಲ್ಲದೆ ಸುಳ್ಳಾರೋಪಗಳನ್ನು ಮಾಡುವುದರಿಂದ ದೂರ ಸರಿಯಬೇಕು ಎಂದು ನಾವು ವಿನಂತಿಸಿಕೊಳ್ಳುತ್ತೇವೆ.

***********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಆ ಯಶಸ್ಸನ್ನು ಅಲ್ಲಾಹನನ್ನು ಗುರುತಿಸುವ ಒಂದು ಸಾಧನವನ್ನಾಗಿ ಮಾಡಿಕೊಳ್ಳಿರಿ. ನಿಮ್ಮ ಸಾಮರ್ಥ್ಯ ಮತ್ತು ಪ್ರಯತ್ನದ ಮೇಲೆ ಗರ್ವ ಪಡಬೇಡಿರಿ. ಈ ಯಶಸ್ಸು ನಮ್ಮ ಯಾವುದೇ ಅರ್ಹತೆ ಅಥವಾ ಶ್ರಮದ ಫಲ ಎಂದು ಭಾವಿಸಬೇಡಿರಿ. ಕರುಣಾನಿಧಿಯಾದ ಅಲ್ಲಾಹನು, ಸತ್ಯನಿಷ್ಠೆಯಿಂದ ಮಾಡಿದ ಯಾರ ಶ್ರಮವನ್ನೂ ವ್ಯರ್ಥಗೊಳಿಸುವುದಿಲ್ಲ. ನಿಮ್ಮ ಶ್ರಮಕ್ಕೆ ಖಂಡಿತವಾಗಿಯೂ ಅವನು ಫಲ ನಿಡುವನು. ಉದಾಹರಣೆಗೆ ನೋಡಿರಿ – ನೂರಾರು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗುತ್ತಾರೆ. ಅವರೆಲ್ಲರೂ ಶ್ರಮಪಡದವರೇ ಅಥವಾ ದಡ್ಡರೆ? ಬದಲಾಗಿ ಅವರಲ್ಲಿ ಕೆಲವರು ಎಷ್ಟೊಂದು ಜಾಣರಾಗಿರುತ್ತಾರೆಂದರೆ ಆ ಉತ್ತೀರ್ಣರಾದವರನ್ನೂ ಹಿಂದಿಕ್ಕುವಂತವರಾಗಿರುತ್ತಾರೆ. ಆದುದರಿಂದ ತಿಳಿಯುವುದೇನೆಂದರೆ ಅವನು ನಮ್ಮ ಶ್ರಮವನ್ನು ಎಂದೂ ವ್ಯರ್ಥಗೊಳಿಸಲಿಕ್ಕಿಲ್ಲ ಎಂದು. ಆ ಕೃತಜ್ಞತೆಯ ಫಲವಾಗಿ ಅಲ್ಲಾಹನೊಂದಿಗೆ ನಮ್ಮ ಪ್ರೀತಿ ಹೆಚ್ಚಾಗುವುದು ಮತ್ತು ವಿಶ್ವಾಸ ವೃದ್ಧಿಯಾಗುವುದು. ಅಷ್ಟೇ ಅಲ್ಲ ಇನ್ನೂ ಹೆಚ್ಚಿನ ಯಶಸ್ಸುಗಳು ದೊರೆಯುವುವು. ಏಕೆಂದರೆ ಅಲ್ಲಾಹನು ಹೇಳುತ್ತಾನೆ – ನೀವು ನನ್ನ ಅನುಗ್ರಹಗಳಿಗೆ ಕೃತಜ್ಞರಾದರೆ ನಾನು ಇನ್ನೂ ಹೆಚ್ಚು ಅನುಗ್ರಹಿಸುವೆನು. ಕೃತಘ್ನರಾದರೆ ಶಿಕ್ಷೆಗೆ ಗುರಿಪಡಿಸುವೆನು.

**ಸತ್ಯವಿಶ್ವಾಸಿ (ಮೂಮಿನ್) ಮತ್ತು ಅವಿಶ್ವಾಸಿ (ಕಾಫಿರ್) ಗಿರುವ ವ್ಯತ್ಯಾಸಗಳು:**

ಮೂಮಿನ್‌ನ (ಸತ್ಯ ವಿಶ್ವಾಸಿ) ಕಾರ್ಯವೇನೆಂದರೆ ಅವನು ತನಗೆ ದೊರೆತಿರುವ ಯಶಸ್ಸಿನ ಬಗ್ಗೆ ವಿನೀತನಾಗಿರುವನು ಮತ್ತು ಅಲ್ಲಾಹನನ್ನು ಕೊಂಡಾಡುವನು. ಅಲ್ಲಾಹನು ತನ್ನ ಮೇಲೆ ಅನುಗ್ರಹ ತೋರಿದನು ಎಂದು ಭಾವಿಸಿ ತನ್ನ ಹೆಜ್ಜೆಗಳನ್ನು ಮುಂದೆ ಹಾಕುವನು ಮತ್ತು ಎಲ್ಲಾ ಪರೀಕ್ಷೆಗಳಲ್ಲಿ ದೃಢತೆ ತೋರಿಸಿ ಅಲ್ಲಾಹನ ಅನುಗ್ರಹ ಪಡೆಯುವನು. ನೋಡಲಿಕ್ಕೆ ಓರ್ವ ವಿಶ್ವಾಸಿ ಮತ್ತು ಅವಿಶ್ವಾಸಿಯ ಯಶಸ್ಸು ಒಂದೇ ರೀತಿಯದ್ದಾಗಿರುತ್ತದೆ. ಆದರೆ ನೆನಪಿಡಿರಿ. ಅವಿಶ್ವಾಸಿಯ ಯಶಸ್ಸು ದುರ್ಮಾರ್ಗವಾಗಿದೆ. ಮತ್ತು ಆ ಯಶಸ್ಸನ್ನು ದುರ್ಮಾರ್ಗಕ್ಕೆ ಕೊಂಡೊಯ್ಯುವ ಕಾರಣವೇನೆಂದರೆ ಅವನು ಅಲ್ಲಾಹನನ್ನು ನಂಬುವುದಿಲ್ಲ. ಬದಲಾಗಿ ಅದಕ್ಕೆ ತನ್ನ ಶ್ರಮ, ಬು ಬುದ್ಧಿವಂತಿಕೆ ಮತ್ತು ಅರ್ಹತೆಯೇ ಕಾರಣವೆಂದು ಭಾವಿಸುತ್ತಾನೆ. ಆದರೆ ಮೂಮಿನ್ ಅಲ್ಲಾಹನನ್ನು ನಂಬಿ ಅಲ್ಲಾಹನೊಂದಿಗೆ ಒಂದು ಹೊಸ ಸಂಬಂಧವನ್ನು ಜೋಡಿಸುತ್ತಾನೆ. ಆ ಮೂಲಕ ಅವನು ಪ್ರತಿ ಯಶಸ್ಸಿನ ಮೇಲೆ ಅಲ್ಲಾಹನ ಒಂದು ಹೊಸ ರೂಪವನ್ನು ಕಾಣುತ್ತಾನೆ. ಅವನಲ್ಲಿ ಬದಲಾವಣೆ ಉಂಟಾಗುತ್ತದೆ. **"ಇನ್ನಲ್ಲಾಹ್ ಮುಅಲ್ಲಝೀನತ್ತಖೌ"** (ಅನ್ನಹಲ್–129) ಎಂದರೆ – ನಿಶ್ಚಯವಾಗಿಯೂ ಭಯ ಭಕ್ತಿಯುಳ್ಳವರ ಜೊತೆಯಲ್ಲಿ ಅಲ್ಲಾಹನಿದ್ದಾನೆ. ಇಲ್ಲಿ ನೆನಪಿಡಬೇಕಾದ ವಿಷಯವೇನೆಂದರೆ ಪವಿತ್ರ ಖುರ್‌ಆನಿನಲ್ಲಿ **"ತಖ್ವಾ"** ಎಂಬ ಪದವು ಹಲವು ಸಲ ಬಂದಿರುತ್ತದೆ. ಅಂದರೆ ಯಾರು ಅಲ್ಲಾಹನಿಗೆ ಆದ್ಯತೆ ಕೊಡುತ್ತಾನೋ, ಅಲ್ಲಾಹನು ಅವನಿಗೆ ಆದ್ಯತೆ ನೀಡುತ್ತಾನೆ ಮತ್ತು ಲೋಕದಲ್ಲಿ ಎಲ್ಲಾ ತರಹದ ಅವಮಾನಗಳಿಂದ ರಕ್ಷಿಸುತ್ತಾನೆ. ನನ್ನ ವಿಶ್ವಾಸವೇನೆಂದರೆ ಮನುಷ್ಯನು ಎಲ್ಲ ವಿಧದ ಅವಮಾನ ಮತ್ತು ಕಷ್ಟಗಳಿಂದ ದೂರ ಉಳಿಯಬೇಕಾದರೆ ಅವನಿಗೆ ಒಂದೇ ಒಂದು ಮಾರ್ಗವಿದೆ. ಅದುವೇ ಭಯಭಕ್ತಿಯ ಮಾರ್ಗ. ಹಾಗಾದರೆ ಮಾತ್ರ ಅವನಿಗೆ ಯಾವ ಕೊರತೆಯೂ ಉಂಟಾಗಲಾರದು. ಸತ್ಯವಿಶ್ವಾಸಿಯನ್ನು ಅವನ ಯಶಸ್ಸುಗಳೇ ಮುಂದಕ್ಕೆ ಕೊಂಡ್ಯೊಯ್ಯುತ್ತವೆ. ಅವನು ನಿಂತಲ್ಲೇ ನಿಶ್ಚಲನಾಗಿ ನಿಲ್ಲುವುದಿಲ್ಲ.

**(ಮಲ್ಫೂಝಾತ್, ಸಂಪುಟ–1, ಪುಟ–134 ಮುದ್ರಣ 2018 ಖಾದಿಯಾನ್)**

"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."
"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
M.B. Nasir Ahmed & Family, Bengaluru, Karnataka

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ದುಆವಿನ ಆಕಾಂಕ್ಷಿ:
Mubarak Ahmed Naseem & Family, Shimoga, Karnataka

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 18 April 2024, Issue No. 16

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

### ಅನಿಸಿಕೆಗಳು

ಆಮಿರ್ ಮಹ್ಮೂದ್ ನಾಗಿ ಸಾಹಿಬ್ ಅವರು ಅಹ್ಮದಿಯಾ ಜಮಾಅತ್ Fort worth ನಿಂದ ಬಂದಿದ್ದರು ಅವರು ಹೇಳಿದರು. ಭೇಟಿಯ ಮುಂಚೆ ನಮಗೆ ಈ ಚಿಂತೆ ಕಾಡುತ್ತಿತ್ತು. ನಾವು ಹುಝೂರೆ ಅನ್ವರ್(ಅತಬಿಅ)ರ ಜೊತೆ ಮಾತನಾಡಲು ಆಗಲಿಕ್ಕಿಲ್ಲ. ಆದರೆ ಒಳಗೆ ಹೋಗುತ್ತಿದ್ದಂತೆ ನಮಗೆ ಎಷ್ಟೊಂದು ನೆಮ್ಮದಿ ದೊರಕಿತ್ತೆಂದರೆ ನಾವು ಯಾವ ವಿಷಯದಲ್ಲಿ ಮಾತನಾಡಬಹುದಾಗಿತ್ತು.

ಜಾರ್ಜಿಯಾ ಜಮಾಅತ್‌ನಿಂದ ಬಂದ ಮಿತ್ರರೊಬ್ಬರು ಕಾಶಿಫ್ ಮೆಹ್ಮೂದ್ ಬಟ್ ಸಾಹಿಬ್ ಹೇಳುತ್ತಾರೆ. ಹುಝೂರೆ ಅನ್ವರ್(ಅತಬಿಅ) ನನಗೆ ಉಪದೇಶ ನೀಡುತ್ತಾ ಹೇಳಿದರು. ನೋಡಿ ಅಲ್ಲಾಹನು ಸಾಂಪತ್ತಿಕವಾಗಿ ಎಷ್ಟೊಂದು ಉದಾರವಾಗಿ ದಯಪಾಲಿಸಿದ್ದಾನೆ. ಈಗ ಸಮಯ ಬಂದಿದೆ. ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ ಮತ್ತು ಅನ್ಫಾಖ್ ಫೀ ಸಬೀಲಿಲ್ಲಾಹ್‌ದಲ್ಲಿ ಭಾಗವಹಿಸಿರಿ.

ನಾಸಿರ್ ರಾಝೀ ಸಾಹಿಬ್ ಅವರು San Diego ನಿಂದ 1379 ಮೈಲು ದೂರದ ಪ್ರಯಾಣ ಬೆಳೆಸಿ ಭೇಟಿಕ್ಕೋಸ್ಕರ ಬಂದಿದ್ದರು. ಹೇಳುತ್ತಾರೆ. ನನ್ನ ಹೆಸರು ಕೇಳುತ್ತಲೇ ಹುಝೂರೆ ಅನ್ವರ್(ಅತಬಿಅ)ರಿಗೆ ನಾನು ಯಾರೆಂಬುದನ್ನು ತಿಳಿಯಿತು. ಹುಝೂರೆ ಅನ್ವರ್(ಅತಬಿಅ) ನನ್ನ ಕುಟುಂಬದವರಿಗೆ ಅರುಹಿದವರಾಗಿದ್ದರು. ಹುಝೂರೆ ಅನ್ವರ್(ಅತಬಿಅ) ನನ್ನ ಕುಟುಂಬದವರು ಎಲ್ಲ ಇರುವರು ಎಂಬುದನ್ನು ಸಹ ಅರಿತದ್ದನ್ನು ಕಂಡು ನನಗೆ ಆಶ್ಚರ್ಯವಾಯಿತು. ಹುಝೂರೆ ಅನ್ವರ್(ಅತಬಿಅ) ನನಗೆ ತಿಳಿಸಿದರು. ಇಮ್ಮ ಓರ್ವ ಸಹೋದರ ಅತ್ತೆ ಜರ್ಮನಿಯಲ್ಲಿ ಇರುತ್ತಾರೆ. ಮತ್ತೊಬ್ಬರು ಫ್ರಾನ್ಸ್‌ನಲ್ಲಿರುತ್ತಾರೆ.

ನಾಸಿರ್ ರಾಝಿ ಸಾಹಿಬರ ಕಿರಿಯ ಮಗಳು ಹೇಳಿದಳು. ನನಗಾಗಿ ಇದು ವಿಶೇಷ ರೀತಿಯ ಕ್ಷಣವಾಗಿದೆ. ನಾವು ಈ ದಿನವನ್ನು ಎಂದೂ ಮರೆಯಲಾರೆ.

Dallas ಜಮಾಅತಿನ ಸದಸ್ಯರೋರ್ವರು ಹಮಾದ್ ಜಾವೇದ್ ಸಾಹಿಬ್ ಹೇಳಿದರು. ಹುಝೂರೆ ಅನ್ವರ್(ಅತಬಿಅ) ಅವರಿಗೆ ಅಲ್ಲಾಹನು ಒಂದು ರೀತಿಯ ಪ್ರತಾಪ ನೀಡಿರುತ್ತಾನೆ. ನನಗೆ ಮಾತೇ ಆಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾನು Dallas ನಲ್ಲಿರುತ್ತೇನೆ ಮತ್ತು ದಿನದ ಕೊನೆಯ ಭಾಗದಲ್ಲಿ ಸಾಮಾನ್ಯವಾಗಿ ಬಹಳ ದೌರ್ಬಲ್ಯ ಅನುಭವಿಸಿದಂತಾಗುತ್ತದೆ. ತಕ್ಷಣ ನನ್ನ ಎಲ್ಲ ದೌರ್ಬಲ್ಯತೆ ಮಾಡಲಾಯಿತು ಮತ್ತು ನನಗೆ ಒಂದು ಹೊಸ ಜೀವ ಬಂದಂತಾಯಿತು.

ಅಹ್ಮದ್ ಜಮಾಲ್ ಸಾಹಿಬ್ ಅವರು ಹ್ಯೂಸ್ಟನ್ ಜಮಾಅತ್‌ನಿಂದ ಬಂದಿದ್ದರು. ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಭೇಟಿಯ ಪ್ರಾರಂಭದಲ್ಲಿ ಹುಝೂರರ ಜೊತೆ ಆಲಂಗಿಸದಿದ್ದಕ್ಕೆ ತುಂಬ ದು:ಖವಾಯಿತು. ಆದರೆ ಅದೇ ಸಮಯಕ್ಕೆ ಹುಝೂರ್ ನನ್ನ ಉಂಗುರ ತೆಗೆದುಕೊಂಡರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಉಂಗುರಕ್ಕೆ ತಾಗಿಸಿ ಅನುಗ್ರಹಿಸಿದರು. ನನ್ನ ಮಗನಿಗೆ ಮಾತನಾಡಲು ಶಕ್ತಿಯಿಲ್ಲ ಎಂದು ಹೇಳಿದಾಗ ಹುಝೂರ್ ಹೇಳಿದರು. ಅವನಿಗೆ ಹೇಳಿ ಮೆಲ್ಲಮೆಲ್ಲನೆ ಮಾತನಾಡಲಿ, ಅವನು ಸರಿಯಾಗಿ ಮಾತನಾಡಬಹುದು.

ಆಫ್ತಾಬ್ ಮುನೀರ್ ಸಾಹಿಬ್ ಅವರು Dallas ಜಮಾಅತಿನ ಸದಸ್ಯರಾಗಿದ್ದಾರೆ. ಹೇಳುತ್ತಾರೆ. ನನ್ನ ಪದಗಳು ನನ್ನ ಸಂತೋಷವನ್ನು ವಿವರಿಸಲು ಸಾಧ್ಯವಿಲ್ಲ. ನನ್ನಂತಹ ನತಭಾಗ್ಯನಿಗೆ ಅಲ್ಲಾಹನು ಈ ಅನುಗ್ರಹ ದಯಪಾಲಿಸಿದ್ದಾನೆ. ನಾನು ಅಲ್ಲಾಹನು ಆಯ್ದ ದಾಸನ ಮುಂದಿದ್ದು ಅನುಗ್ರಹ ಪಡೆಯುತ್ತಿದ್ದೆ.

Fort worth ಜಮಾಅತ್‌ನಿಂದ ಬಂದ ಮುಹಮ್ಮದ್ Antwi ಸಾಹಿಬ್ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಹುಝೂರೆ ಅನ್ವರ್ ಘಾನಾದ ಬಗ್ಗೆ ಹೆಚ್ಚು ಮಾತನಾಡಿದರು. ಹುಝೂರೆ ಅನ್ವರ್(ಅತಬಿಅ) ಅವರಿಗೆ ಘಾನಾದ ಬಗ್ಗೆ ಬಹಳಷ್ಟು ತಿಳಿದಿದೆ. ಹುಝೂರೆ ಅನ್ವರ್(ಅತಬಿಅ) ನನ್ನ ಪತ್ನಿಗೆ ತಿಳಿಸಿದರು, ನಾನು ನಿಮ್ಮ ಊರಿನಲ್ಲಿ ಪಾಠ ಮಾಡುತ್ತಿದ್ದೆ. ಹುಝೂರೆ ಅನ್ವರ್(ಅತಬಿಅ) ಘಾನಾದ ಲಂಚಕೋರ ರಾಜಕಾರಣಿಗಳ ಬಗ್ಗೆ ಮಾತನಾಡಿದರು ಮತ್ತು ಹೇಳಿದರು. ಅವರು ತಮ್ಮ ಸಂಪನ್ಮೂಲಗಳನ್ನು ಪ್ರಾಮಾಣಿಕವಾಗ ಬಳಕೆ ಮಾಡಿದರೆ ಘಾನಾ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುವುದು.

ಖಾಲಿದ್ Antwi ಯೊಬ್ಬ ಯುವಕನು ಹೇಳಿದನು. ಹುಝೂರೆ ಅನ್ವರ್(ಅತಬಿಅ) ನಿಂದ ನನಗೆ ತುಂಬಾ ಶಾಂತಿ ದೊರೆಯಿತು. ಹುಝೂರ್ ನನಗೆ ಭರವಸೆ ನೀಡಿದರು. ನನ್ನ ಜೀವನದಲ್ಲಿ ಎಲ್ಲವೂ ಸರಿಯಾಗಬಹುದು.

ತೌಹಿರ್ ಅಹ್ಮದ್ ಮಲಿಕ್ ಸಾಹಿಬ್ Dallas ಜಮಾಅತಿನ ಸದಸ್ಯರು ಹೇಳುತ್ತಾರೆ. ನನ್ನ ಇಬ್ಬರು ಮಕ್ಕಳ ಅಹ್ಮದಿಯೇತರ ಹುಡುಗಿಯವರಿಂದ ವಿವಾಹವಾಗಿದ್ದಾರೆ. ನಾನು ಹುಝೂರೆ ಅನ್ವರ್(ಅತಬಿಅ) ಅವರಿಗೆ ನನ್ನ ಕಿರಿಯ ಮಗ ಅಹ್ಮದಿ ಹುಡುಗಿಯಿಂದ ವಿವಾಹವಾಗುವ ಬಯಕೆ ವ್ಯಕ್ತಪಡಿಸಿದಾಗ ಹುಝೂರೆ ಅನ್ವರ್(ಅತಬಿಅ) ದುಆ ಮಾಡಿದರು.

Dallas ಜಮಾಅತಿನ ಸದಸ್ಯರಾದ ಅನ್ಸರ್ ಮಲಿಕ್ ಸಾಹಿಬ್ ಹೇಳುತ್ತಾರೆ. ನಾನು ಹುಝೂರೆ ಅನ್ವರ್(ಅತಬಿಅ) ಅವರಿಗೆ ತಿಳಿಸಿದೆ, ನನಗೆ ಉರ್ದು ಹೇಳಲು ಬರುವುದಿಲ್ಲ. ಆಗ ಹುಝೂರೆ ಅನ್ವರ್(ಅತಬಿಅ) ಹೇಳಿದರು. ನೀವು ಸದಾ ಏಷಿಯಾದವರಾಗಿಯೇ ಉಳಿಯುವಿರಿ. ಆದ್ದರಿಂದ ನೀವು ನಿಮ್ಮ ಭಾಷೆಯನ್ನು ಕಲಿಯಿರಿ.

ಹುಝೂರೆ ಅನ್ವರ್(ಅತಬಿಅ) ನನಗೆ ಉಂಗುರ ನೀಡಿ ಹೇಳಿದರು. ನಾನು ಈ ಉಂಗುರ ನೀವು ಅಹ್ಮದಿ ಹುಡುಗಿಯ ಜೊತೆ ವಿವಾಹವಾಗುವಿರಿ ಎಂಬ ಷರತ್ತಿನ ಮೇರೆಗೆ ನೀಡುತ್ತಿದ್ದೇನೆ.

Austin ಜಮಾಅತಿನಿಂದ ಭೇಟಿಯಾಗಿ ಬಂದ ಮಿತ್ರರು ಅಬ್ದುಲ್ ಬಾಸಿತ್ ಖಾನ್ ಸಾಹಿಬ್ ಹೇಳುತ್ತಾರೆ. ನಾನು ಬಹಳಷ್ಟು ಪ್ರಸಿದ್ಧ ಜನರೊಂದಿಗೆ ಭೇಟಿಯಾಗಿದ್ದೇನೆ. ಅವರೊಡನೆ ಯಾವ ಗಾಬರಿಯನ್ನಾಗಲಿ ಅನುಭವಿಸಲಿಲ್ಲ. ಆದರೆ ಹುಝೂರೆ ಅನ್ವರ್(ಅತಬಿಅ)ರಿಂದ ಭೇಟಿ ಮಾಡಿದಾಗ ಹುಝೂರರ ಮುಂದೆ ಹೇಳಲಾಗಲಿಲ್ಲ. ನನ್ನ ಬಾಯಿಯಿಂದ ಒಂದು ಪದ ಸಹ ಹೊರಡಲಿಲ್ಲ.

Dallas ಜಮಅತಿನ ಓರ್ವ ಯುವಕ ಸಯ್ಯದ್ ನೋಮಾನ್ ಖುರ್ಷಿದ್ ಸಾಹಿಬ್ ಮಾತನಾಡುತ್ತಾ ಅಳತೊಡಗಿದರು. ಅವರಿಂದ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಹೇಳಿದರು. ನಾನು ಹುಝೂರರಿಗೆ ಭೇಟಿಯಾಗಿದ್ದೇನೆ. ಇದಕ್ಕಿಂತ ಹೆಚ್ಚು ನನಗೆ ಇನ್ನೇನು ಬೇಕು. ನನಗೆ ಎಲ್ಲವೂ ಲಭಿಸಿದಂತಾಗಿದೆ. ಹುಝೂರ್ ನನಗೆ ನೋಡಿ ಹೇಳಿದರು. ನೀವು ಇಂದು ಮಸೀದಿಗೆ ಬಂದಿರಲಿಲ್ಲ. ಹುಝೂರ್ ಅನ್ವರ್ ಅಷ್ಟೊಂದು ಕಾರ್ಯನಿರತರಾಗಿ ಏನಾದರೂ ಈ ಅತ್ಯಂತ ಕಿರು ಸೇವಕನನ್ನು ಮರೆಯಲಿಲ್ಲ

### ಸ್ನೇಹಿತರೊಂದಿಗೆ ಬಾರ್ಬಿಕ್ಯುವಿನ ಕಾರ್ಯಕ್ರಮ

ಭೇಟಿಯ ಈ ಕಾರ್ಯಕ್ರಮವು ರಾತ್ರಿ 8:20 ವರೆಗೆ ಮುಂದುವರೆಯಿತು. ಇಂದು ಸಂಜೆ ಜಮಾಅತ್ ಡಲ್ಲಾಸ್ ತನ್ನ ಸ್ಥಳೀಯ ಸ್ನೇಹಿತರೊಂದಿಗೆ ಮತ್ತು ಇತರ ವಿವಿಧ ಜಮಾಅತುಗಳಿಂದ ಬಂದ ಅತಿಥಿಗಳಿಗೆ ಬಾರ್ಬಿಕ್ಯೂ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ಸ್ನೇಹಿತರ ನಡುವೆ ಆಗಮಿಸಿದರು.

ರಸ್ತೆಯಲ್ಲಿ ಒಂದು ಜಾಗದಲ್ಲಿ ಅನ್ವರ್ ಮುಹ್ಮದ್ ಖಾನ್ ಸಾಹಿಬ್ (ನೆಷ್ನಲ್ ಸೆಕ್ರಟರಿ ತೆಹರೀಕ್ ಜದೀದ್) ಮತ್ತು ಅಮ್ಜದ್ ಮುಹ್ಮದ್ ಖಾನ್ ಸಾಹಿಬ್ ನೆಷ್ನಲ್ ಸೆಕ್ರಟರಿ ಉಮೂರೆ ಖಾರಿಜ ಕಾಯುತ್ತಿದ್ದರು. ಹುಝೂರೆ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ಮುಹಮ್ಮದ್ ಖಾನ್ ಸಾಹಿಬ್‌ರೊಡನೆ ಕೇಳಿದರು. Zion ನಲ್ಲಿ ಶನಿವಾರ ಸಂಜೆ ಉಪಾಹಾರದ ನಂತರ ಅತಿಥಿಗಳು Exhibition ನೋಡಿದ್ದಾರೆಯೇ, ಎಷ್ಟು ಜನರು ನೋಡಿದರು? ಆಗ ಅನ್ವರ್ ಮುಹಮ್ಮದ್ ಖನ್ ಸಾಹಿಬ್ ಹೇಳಿದರು. ಎರಡು ನೂರಕ್ಕಿಂತ ಹೆಚ್ಚು ಮುಸ್ಲಿಮೇತರ ಬಾಂಧವರು ಸಮಾರಂಭದ ನಂತರ ಬಂದು Exhibition ನೋಡಿದರು ಮತ್ತು ಪ್ರಭಾವಿತರಾಗಿ ಹೊದರು. ಅದೇ ರೀತಿಯಲ್ಲಿ 1100 ಕ್ಕಿಂತ ಹೆಚ್ಚು ಅಹ್ಮದಿ ಸ್ನೇಹಿತರು ವಸ್ತು ಪ್ರದರ್ಶನ ವೀಕ್ಷಿಸಿದರು.

(ಮುಂದುವರಿಯುವುದು)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.